ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೨, ಸಂಚಿಕೆ ೯, ಫೆಬ್ರವರಿ ೨೦೧೫

ಛಾಯಾಗ್ರಾಹಕ:
ಶ್ರೀ ನಾಗಶೈಲ ಕುಮಾರ್

Find us on: facebook®

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಈಗಿನ ಸುದ್ದಿ ... ಪು. ೧
ಸಂಪಾದಕೀಯ ... ಪು. ೨
ಕವಿ ಮುದ್ದಣ-ಲೇಖನ ... ಪು. ೩

ಚಿಲುಮೆಯ ಒಳಗೆ

ಭಗವದ್ಗೀತೆ-ವಿಶ್ಲೇಷಣೆ ... ಪು. ೫
ವಿಚಾರ-ವಿಹಾರ ... ಪು. ೬
ರಾಂ ರಾಮ! ಹಾಸ್ಯ ... ಪು. ೭

ಚಿಲುಮೆಯ ಒಳಗೆ

ಕಥಾಚಿಲುಮೆ ... ಪು. ೧೦
ರೆಸಿಪಿ ಕೊಡ್ತೀರಾ! ... ಪು. ೧೦
ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೧

ಚಿಲುಮೆಯ ಒಳಗೆ

ಪದ ಪುಂಜ/ರಂಗೋಲಿ ... ಪು. ೧೨
ಶಕ್ಕು ಶಾಪ್ಪಿಂಗ್ - ಹಾಸ್ಯ - ... ಪು. ೧೩
ಕರ್ನಾಟಕ -ರಾಜವಂಶಗಳು ... ಪು. ೧೪

ಚಿಲುಮೆಯ ಒಳಗೆ

ವಿಜ್ಞಾನ ... ಪು. ೧೬
ಅಲ್ಲಲ್ಲಿ ಏನೇನು ... ಪು. ೧೬

ಹೊರನಾಡ ಚಿಲುಮೆಯನ್ನು ನಿಮ್ಮ ಸ್ನೇಹಿತರಿಗೆ ಪರಿಚಯಿಸಿ

ಈಗಿನ ಸುದ್ದಿ

ಸಿಡ್ನಿಯಲ್ಲಿ ೨ದಿನದ ಕನ್ನಡ ಕ್ರಾಶ್ ಕೋರ್ಸ್ – ವರದಿ

ತಾಯಿ ನಾಡು, ಮಾತೃ ಭೂಮಿ/ಭಾಷೆ ಇವುಗಳ ಬಗ್ಗೆ ಹೊರನಾಡಿಗೆ ಬಂದಮೇಲೆ ಉಲ್ಬಣಗೊಳ್ಳುತ್ತದೆ ಎನ್ನುವ ಮಾತು ಎಷ್ಟೊಂದು ಬಾರಿ ಆಲಿಸಿದ್ದೇವೆ. ಆದರೂ ಈ ನುಡಿ ಸುಳ್ಳಾಗುತ್ತಿರುವುದು ಸತ್ಯ. ನಮ್ಮವರೇ ನಮ್ಮ ಭಾಷೆಯ ಬಗ್ಗೆ ತೋರುತ್ತಿರುವ ಆಸಕ್ತ ಕ್ಷೀಣಿಸುತ್ತಿದೆ. ಇನ್ನು ಕರ್ನಾಟಕದಿಂದ ಬಂದು ಹೊರದೇಶದಲ್ಲಿ ನೆರೆಸಿರುವವರಿಗೆ ಪರ ಭಾಷಿಗರಿಗೆ ತಂತಮ್ಮ ನುಡಿಯಮೇಲೆ ಅದೆಲ್ಲಿಲ್ಲದ ಅಭಿಮಾನ ಉಕ್ಕಿ ನಮ್ಮೂರಿನಲ್ಲೇ ಬಂಡವಾಳ ಹೂಡಿ, ಹೊರಗಿನಿಂದ ರಜೆಯಲ್ಲಿ ಹಾರಿ ಅಲ್ಲಿಗೇ ಹೋಗಿ ಇಳಿದು ನಮ್ಮೂರಿನಲ್ಲೇ ಮೋಜು ಮಜ ಶಾಪಿಂಗ್ ಎಲ್ಲಾ ಮಾಡಿಬರುವ ಹವ್ಯಾಸವಿದ್ದರೂ ಕನ್ನಡ ಮಾತ್ರ ಬೇಡ, ಇದು ಶುದ್ಧ ಅನ್ಯಾಯ.

ವಿಷಯ ಹೀಗಿರುವಾಗ ನಾವು (ಸಿಡ್ನಿ ಕನ್ನಡ ಶಾಲೆ) ಯಾಕೆ ಎರಡು ದಿನದ ಕ್ರಾಶ್ ಕೋರ್ಸ್ ಮಾಡಬಾರದು? ಎಷ್ಟೋ ಮಕ್ಕಳು ನಮ್ಮ ವಾರಾಂತ್ಯದ ಶಾಲೆಗೆ ಕಳುಹಿಸಲು ಸಾಧ್ಯವಾಗುತ್ತಿಲ್ಲ, ಕೆಲವು ಮಕ್ಕಳದ್ದು ದೂರದ ನಗರಗಳಲ್ಲಿ ವಾಸ, ಇನ್ನೂ ಕೆಲವರು ಮಾತನಾಡುವುದು ಬಲ್ಲವರಾದರೂ ಕಾರಣಾಂತರಗಳಿಂದ ಕನ್ನಡ ಓದಿಬರೆಯಲು ಸಾಧ್ಯವಾಗಿಲ್ಲ ಅಥವಾ ಅವರು ಕನ್ನಡಿಗರೇ ಆಗಿದ್ದು ಅವರ ವಿದ್ಯಾಭ್ಯಾಸ ಹೊರನಾಡಿನಲ್ಲಿ ಆಗಿದ್ದಿರಬಹುದು ಅಂತಹವರನ್ನೆಲ್ಲಾ ಗಮನದಲ್ಲಿಟ್ಟುಕೊಡು ಈ ಯೋಜನೆ ಹಾಕಲಾಯಿತು. ಆಸ್ಟ್ರೇಲಿಯಾದ ಬೇರೆ ರಾಜ್ಯ/ಊರಿನಿಂದ ಬರುವವರಿಗೆ ಉಚಿತವಾಗಿ ಉಳಿದುಕೊಳ್ಳುವ ವ್ಯವಸ್ತೆ ಇದ್ದರೂ ಸಿಡ್ನಿಯವರೇ ಹೆಚ್ಚು ನೊಂದಣಿಸಿಕೊಂಡಿದ್ದರು. ಹೊರರಾಜ್ಯ/ದೇಶಗಳಿಂದ ಈ ತರಬೇತಿಯ ಓದುವ ಮಾಹಿತಿಗಳಿಗೆ ಮಾತ್ರ ಬಹಳ ಬೇಡಿಕೆ ಬಂದಿತು. ಸುಮಾರು ಹದಿನಾರು ಜನ ಈ ತರಬೇತಿಗೆ ಒಂದು ತಿಂಗಳ ಮೊದಲೇ ನೊಂದಣಿಸಿ, ಜನವರಿ ೧೭ ಮತ್ತು ೧೮ ರಂದು ಎಲ್ಲವಯಸ್ಸಿನ ವಿದ್ಯಾರ್ಥಿಗಳು ಸಮಯಕ್ಕೆ ಸರಿಯಾಗಿ ಹಾಜರಾಗಿದ್ದದು.ಕನ್ನಡ ಕಲಿಸುವ ಮುಖ್ಯ ಜವಾಬ್ದಾರಿ ಹೊತ್ತಿದ್ದ ನನಗೆ ಶುರುಮಾಡುವ ಮೊದಲು ಎದೆಯಲ್ಲಿ ಡವಡವ ಎನ್ನುತ್ತಿತ್ತು. ಏನಪ್ಪಾ, ಇವರಲ್ಲಿ ಸ್ಫೂರ್ತಿ ತುಂಬಿ ಮರುದಿನವೂ ವಾಪಸ್ ಬರುವ ಹಾಗೆ ಪಾಠ ಮಾಡಲು ಆಗುತ್ತದೆಯೇ? ಎನ್ನುವ ಭೀತಿ ಮನದಲ್ಲಿತ್ತು. ಏಕೆಂದರೆ ಅವರೆಲ್ಲಾ ಪುಟ್ಟ ಮಕ್ಕಳಲ್ಲ. ಆದರೆ ಆ ಭಯ ಅರ್ಧ ಘಂಟೆಗೆ ಕರಗಿಹೋಯಿತು. ಅವರ ಕಲಿಯುವ ಶ್ರದ್ಧೆ ಆಸಕ್ತಿ ಎಲ್ಲರನ್ನೂ ಅಚ್ಚರಿ ಮೂಡಿಸಿತು. ಮನೆಯಲ್ಲಿ ತಮಿಳು, ಕೊಂಕಣಿ ಮತ್ತು ಫ್ರೆಂಚ್ ಮೂಲದವರೂ ಒಬ್ಬರು ಇದ್ದು ಮಿಕ್ಕವರೆಲ್ಲಾ ಕನ್ನಡದವರೇ ಆಗಿದ್ದರು. ಕೆಲವರು ಕನ್ನಡ ಮಾತನಾಡಲು ಬಲ್ಲವರಿದ್ದರು ಮಿಕ್ಕವರು ಒಂದಕ್ಷರ/ಪದದ ಗಂಧವೇ ತಿಳಿಯದವರಿದ್ದರು.ಆದರೂ ಅದೆಂಥಾ ಕಲಿಯುವ ಆಸೆಯೆಂದರೆ ಮತ್ತೆ ಮತ್ತೆ ಹೇಳುವ ಗೋಜೇ ಇಲ್ಲದೆ, ಬಹಳ ವೇಗವಾಗಿ ಮೊದಲನೇ ದಿನಕ್ಕೇ ಕಾಗುಣಿತ ಮತ್ತು ಅರ್ಕಾವತ್ತು ಕಲಿತು ಮಾರನೇ ದಿನ ನಾವು ಬಾಗಿಲು ತೆರೆಯುವ ಮುನ್ನವೇ ಎಲ್ಲರೂ ಬಂದು ಕಾಯುತ್ತಿದ್ದುದು ಅಚ್ಚರಿ ಮೂಡಿಸಿತು. ಮರುದಿನ ಭಾನುವಾರ ಒತ್ತು ಅಕ್ಷರ, ಸಂಯುಕ್ತ ಅಕ್ಷರ ಮತ್ತು ಕೆಲವು ಮುದ ನೀಡುವ ಆಟಗಳೊಂದಿಗೆ ಮಧ್ಯಾಹ್ನದ ವೇಳೆಗಾಗಲೇ ವಾಕ್ಯಗಳನ್ನು ಒದುವಂತಾದರು. ವಿದ್ಯಾರ್ಥಿಗಳಿಗೆ ಅವರು ಪ್ರತಿ ಪದ ವಾಕ್ಯಗಳನ್ನು ಓದುವಾಗ ಅವರು ಅನುಭವಿಸುತ್ತಿದ್ದ ಆನಂದ ಅವರ ಮುಖದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಕೆಲವರಂತೂ oh my god I can read this big word now ! ಎಂದು ಕುರ್ಚಿಯಿಂದ ಎದ್ದೇ ಬಿಡುತ್ತಿದ್ದರು. ಅವರ ಎರಡು ದಿನದ ಸಾಧನೆಗೆ ಕಡೆಯಲ್ಲಿ ಪ್ರಶಂಸಾ ಪತ್ರಗಳನ್ನು ಹಂಚಲಾಯಿತು. ಕಲಿತದ್ದನ್ನು ಮತ್ತೆ ಮೆಲುಕು ಹಾಕುವ ಕೋರ್ಸ್ ನಡೆಯಬೇಕು ಎನ್ನುವ ಉತ್ಸಾಹದ ಮಾತಿನೊಂದಿಗೆ ಎಲ್ಲರನ್ನೂ ಬೀಳ್ಕೊಡಲಾಯಿತು. ಮುಂದಿನ ವರ್ಷವೂ ಇದೇ ರೀತಿಯ ಕ್ರಾಶ್ ಕೋರ್ಸ್ ಕಡೇಯ ಬಾರಿ ಏರ್ಪಡಿಸುವ ಆಲೋಚನೆ ಇದೆ ಎನ್ನುವ ಸಿಹಿಸುದ್ದಿಯೊಂದಿಗೆ ಈ ಪುಟ್ಟ ಅನಿಸಿಕೆ ಅಥವಾ ವರದಿಗೆ ಅಂತ್ಯ ಹೇಳುತ್ತಿದ್ದೇನೆ.. ▪

ವರದಿ ಮತ್ತು ಚಿತ್ರಗಳು: ಕನಕಾಪುರ ನಾರಾಯಣ

ಕೇಳೋಣ

ಪ್ರೇಮಕವಿ, ಕೆ.ಎಸ್.ನ ಅವರ
"ಕಿಟಕಿಯ ಬಾಗಿಲು ತೆರೆದಿತ್ತಂದು ..." ಕೇಳಲು
ಮೇಲಿನ ಚಿತ್ರವನ್ನು ಕ್ಲಿಕ್ ಮಾಡಿ (Click picture to view)

ಹೊಸ ಮಾದರಿಯ
ಒಗಟು
ಪುಟ ೧೦

ನೋಡೋಣ

ಕಾಕನಕೋಟೆ ಚಲನಚಿತ್ರದ ಒಂದು ಅದ್ಭುತ ಹಾಡಾದ
"ಕರಿ ಹೈದನೆಂಬೋನು ಮಾದೇಶ್ವರ ..." ವೀಕ್ಷಿಸಲು ಮೇಲಿನ
ಚಿತ್ರ ಕ್ಲಿಕ್ ಮಾಡಿ (Click picture to view)

ನಿಮ್ಮ ಕಥೆ, ಕವನ, ಸಲಹೆ ಇತ್ಯಾದಿ ನಮಗೆ ಕಳುಹಿಸಿ. ನಮ್ಮ ಇ-ಮೇಲ್ – HORANADACHILUME@GMAIL.COM

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

"ಅಂಗೈಯ್ಯಲ್ಲಿ ಬೆಣ್ಣೆ ಹಿಡಿದುಕೊಂಡು ಊರೆಲ್ಲಾ ತುಪ್ಪಕ್ಕೆ ಅಲೆದರಂತೆ" ಎನ್ನುವ ಮಾತು ಕೇಳಿರುತ್ತೀರಿ. ಇನ್ನೂ ವಿಸ್ತರಿಸಿ ಹೇಳಬೇಕೆಂದರೆ, ಬಹುಶಃ ನಾವುಗಳೆಲ್ಲಾ ಸ್ವತಃ ಬೇರೆ ಬೇರೆ ಸಂದರ್ಭಗಳಲ್ಲಿ ಇದನ್ನು ಅನುಭವಿಸಿಯೂ ಇದ್ದೇವೇನೋ.

ದಿನನಿತ್ಯದ ವ್ಯಾವಹಾರಿಕ ಜೀವನದ ನಡುವೆ, ನಮ್ಮ ಮೆದುಳು ಯಂತ್ರದಂತೆ ಆಗಿಬಿಟ್ಟಿರುತ್ತದೆ ಎಂದು ನಮಗೆ ಅನಿಸಬಹುದಲ್ಲವೇ. ಕುಡಿಯಲು ನೀರು ಹಿಡಿದುಕೊಂಡು ಬಂದಿರುತ್ತೇವೆ. ಟಿ.ವಿ ನೋಡುತ್ತಲೋ ಅಥವಾ ಬಂದ ಮೊಬೈಲ್ ಕರೆ ಸ್ವೀಕರಿಸಲೋ ದೃಷ್ಟಿ ವಿಚಲಿತರಾಗಿ, ತಂದಿಟ್ಟುಕೊಂಡ ನೀರು ಮರೆತುಹೋಗಿ, ಮತ್ತೊಂದು ಲೋಟ ತುಂಬಿಸಿಕೊಂಡು ಕುಡಿದು, ನಂತರ ಅಯ್ಯೋ! ಏನು ಮಾಡಿದೆ ಎಂದು ತಲೆ ಚಚ್ಚಿಕೊಂಡ ಅನುಭವವೂ ಆಗಿರಬಹುದು.

ಇಷ್ಟೆಲ್ಲಾ ಹೇಳುವ ಉದ್ದೇಶ ಇಷ್ಟೇ. ಮುಂದಿನ ಸಂತೋಷಕ್ಕಾಗಿ ಮನುಷ್ಯ ಹಲವು ಬಗೆಯ ಸಿದ್ಧತೆ ಮಾಡುತ್ತಲೇ ಸಾಗಿದ್ದಾನೆ. ಆದರೆ ವರ್ಷ ಕಳೆದಂತೆ, ಮಾಡುತ್ತಿರುವ ಆ ತಯಾರಿ ಮರೆತೇ ಹೋಗಿರಬಹುದು. ಉದಾ: ಹತ್ತು ವರ್ಷದ ಮುಂಚಿನ ಯೋಚನಾ ಲಹರಿಯಲ್ಲಿ ಮಾಡಿಟ್ಟ ಹಣದ ಉಳಿತಾಯವೋ, ಅಥವಾ ಒಡಂಬಡಿಕೆಯೋ ಇತ್ಯಾದಿ ಮರೆತೇ ಹೋಗಿರಬಹುದು. ಮರೆತಿರಲೇ ಬೇಕಂತಲ್ಲ. ನಮ್ಮ ಸಧ್ಯದ ಸ್ಮೃತಿಯಿಂದ ಜಾರಿರಬಹುದು. ಮತ್ತು ಅದರಿಂದ ಪ್ರಸ್ತುತಃ ಏನೂ ಉಪಯೋಗ ಪಡೆದುಕೊಳ್ಳದಿರುತ್ತಲಿರಬಹುದು ಹೀಗಾಗಿ, ಬರೀ ಮುಂದಿನ ಜೀವನಕ್ಕಾಗಿ ಯೋಚಿಸಿ, ಯೋಚಿಸಿ ವಯಸ್ಸು ಕಳೆಯುವ ಬದಲು, ಮುಂದಾಲೋಚನೆಯೊಂದಿಗೆ ಈಗಿನ ಕ್ಷಣದ ಚೆಲುವನ್ನೂ, ಒಲುಮೆಯಿಂದ ಆರಾಧಿಸದಿದ್ದರೆ ಜೀವನದ ರುಚಿ ಸಿಗಲಾರದಲ್ಲವೇ.

ದೂರದ ಒಂದು ದೇಶಕ್ಕೆ ಹೋದರೆ ಮಾತ್ರವೇ ಜನ್ಮವು ಸಾರ್ಥಕ ಎನ್ನುವ ಕಲ್ಪನೆ ಕೆಲವರಲ್ಲಿರಬಹುದು. ಹೋಗಿ ಬಂದವರ ಮಾತುಗಳು ರೆಕ್ಕೆ ಪುಕ್ಕ ತುಂಬಿರಬಹುದು. ಆದರೆ ದೂರದ ಬೆಟ್ಟ ನುಣ್ಣಗೆ ಎನ್ನುವಂತೆ ಎಲ್ಲ ಕಡೆಯೂ ಸುಖ ದುಃಖಗಳ ಮಿಳಿತವಿದ್ದೇ ಇರುತ್ತದೆ ಎನ್ನುವುದೂ ಮನಗಾಣಬೇಕು. ನಮ್ಮ ಸಂದರ್ಭಕ್ಕೆ ಯಾವುದು ಹಿತವೋ ಅದರ ಆಯ್ಕೆ ಮಾಡಿಕೊಳ್ಳುವುದು ಉಚಿತವು. ಇದೇ ಸಿದ್ಧಾಂತವು ಇನ್ನಿತರ ವಿಷಯಗಳಿಗೂ ಅನ್ವಯಿಸಬಹುದು. ಉದಾ: ಇಂತಹುದೇ ಕೆಲಸ, ಈ ತರಹದ್ದೇ ಮನೆ ಇತ್ಯಾದಿ ...

ನೂತನ ವರ್ಷದ ಕಾರ್ಯಾರಂಭವಾಗಿದೆ, ಹೊಸ ಆಲೋಚನೆಗಳು ಬರುತ್ತಲಿರುತ್ತವೆ. ಹೊಸ ಆಸೆ, ಆಕಾಂಕ್ಷೆಗಳಿಗೆ ಮಿತಿಯಿರುವುದಿಲ್ಲವಷ್ಟೇ! ಇವೆಲ್ಲದರ ನಡುವೆ, ನಮ್ಮ ನಮ್ಮ ಬಳಿ ಇರುವ ಅವಕಾಶವೆಂಬ ಬೆಣ್ಣೆಯನ್ನು ಉಪಯೋಗಿಸಿ, ಸಂಪೂರ್ಣ ಅರ್ಪಿತ ಮನದಿಂದ ಹದದಲ್ಲಿ ಕಾಯಿಸಿ, ಸಿಗುವ ಆ ಸಂತೋಷವೆಂಬ ತುಪ್ಪದ ಆಘ್ರಾಣವನ್ನು ಮಾಡೋಣವಲ್ಲವೇ! ▪

ಎರಡು ತಿಂಗಳ ಪ್ರಮುಖ ದಿನಗಳು

ಫೆಬ್ರವರಿ ಶ್ರೀ ಜಯ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ/ಫಾಲ್ಗುಣ ಮಾಸ

03 ಮಂ - ಭಾರತ/ವ್ಯಾಸ ಹುಣ್ಣಿಮೆ
07 ಶ - ಸಂಕಷ್ಟ ಚತುರ್ಥಿ
14 ಶ - ವ್ಯಾಲೆಂಟೈನ್ಸ್ ಡೇ
15 ಭಾ - ವಿಜಯಾ ಏಕಾದಶಿ
17 ಮಂ - ಮಹಾ ಶಿವರಾತ್ರಿ
18 ಬು - ಶಿವರಾತ್ರಿ ಅಮಾವಾಸ್ಯೆ, ಆಶ್ ವೆಡ್ನೆಸ್ ಡೇ
19 ಗು - ಫಾಲ್ಗುಣ ಮಾಸ ಆರಂಭ
20 ಶು - ಶ್ರೀ ರಾಮಕೃಷ್ಣ ಪರಮಹಂಸ ಜಯಂತಿ

ಮಾರ್ಚ್ ಶ್ರೀ ಜಯ/ಮನ್ಮಥ ನಾಮ ಸಂವತ್ಸರ, ಉತ್ತರಾಯಣ,ಶಿಶಿರ/ವಸಂತ ಋತು, ಫಾಲ್ಗುಣ/ಚೈತ್ರ ಮಾಸ

01 ಭಾ - ಅಮಲಕೀ ಏಕಾದಶಿ
05 ಗು - ಹೋಳಿ ಹಬ್ಬ, ಹೋಳಿ ಹುಣ್ಣಿಮೆ
08 ಭಾ - ಅಂ ರಾ ಮಹಿಳಾ ದಿನ
09 ಸೋ - ಸಂಕಷ್ಟ ಚತುರ್ಥಿ
16 ಸೋ - ಪಾಪಮೋಚನಿ ಏಕಾದಶಿ
19 / 20 - ಗು/ಶು ಯುಗಾದಿ ಅಮಾವಾಸ್ಯೆ
21 ಶ - ಚಾಂದ್ರ ಮಾನ ಯುಗಾದಿ, ಚೈತ್ರ ಮಾಸ, ವಸಂತ ಋತು, ಶ್ರೀ ಮನ್ಮಥ ನಾಮ ಸಂವತ್ಸರ ಆರಂಭ
25 ಬು - ದೇವರ ದಾಸಿಮಯ್ಯ ಜಯಂತಿ
28 ಶ - ಶ್ರೀ ರಾಮ ನವಮಿ
31 - ಕಾಮದಾ ಏಕಾದಶಿ

ಮಹಾ ಕವಿ ಮುದ್ದಣ - ಒಂದು ನೆನಪು – ಭಾಗ ೨

ಲೇಖಕರು: ಬೇಲೂರು ರಾಮಮೂರ್ತಿ

ಪಂಜೆ ಮಂಗೇಶರಾಯರು ಮುದ್ದಣನ ಕಾವ್ಯರಚನೆಯನ್ನು ಹೊಗಳುತ್ತಾ ಕುಮಾರವಿಜಯ ಬಿಟ್ಟರೆ ಪ್ರಸಂಗವಿಲ್ಲ ನಂದಳಿಕೆಯವರನ್ನು ಬಿಟ್ಟರೆ ಕವಿಯಿಲ್ಲ ಎಂದು ಹೊಗಳಿದ್ದರು

ಮೊದಲು ಮೊದಲಿಗೆ ಅಳುತ್ತಿರುವ ಮಕ್ಕಳನ್ನು ತೂಗುವ ತಾಯಂದಿರಿಗಾಗಿ ಸುವಾಸಿನಿ ಪತ್ರಿಕೆಗೆ ಜೋ ಜೋ ಅನ್ನುವ ಕವಿತೆ ಸಾಲುಗಳನ್ನು ಬರೆದ. ಅದಕ್ಕೆ ಚಕ್ರಧಾರಿ ಅನ್ನುವ ಕಾವ್ಯನಾಮ ಇಟ್ಟುಕೊಂಡ

1895ರಲ್ಲಿ ರಚಿತವಾದ ಅದ್ಭುತ ರಾಮಾಯಣ ಮತ್ತು 1896ರಲ್ಲಿ ರಚಿತವಾದ ಶ್ರೀ ರಾಮ ಪಟ್ಟಾಭಿಷೇಕ ಎರಡೂ ಕೃತಿಗಳು ಮದರಾಸು ವಿಶ್ವವಿದ್ಯಾನಿಲಯದ ಎಫ.ಎ.ಪರೀಕ್ಷೆಗೆ ಪಠ್ಯಪುಸ್ತಕಗಳಾಗಿದ್ದವು.

ಶ್ರೀ ರಾಮಾಶ್ವಮೇಧ ಕೃತಿ ಕುರಿತು ಪ್ರೋ. ಎಸ್.ವಿ. ರಂಗಣ್ಣ ಅವರು ಹೇಳಿದ ಮಾತು
" ಸಾಮಾನ್ಯ ಚಿತ್ರಕ್ಕೆ ಸುವರ್ಣದ ಚೌಕಟ್ಟು "

ನಂದಳಿಕೆ ಲಕ್ಷ್ಮೀನಾರಾಯಣನಿಗೆ (ಮುದ್ದಣನಿಗೆ) ಬರವಣಿಗೆಗೆ ಪ್ರೇರಣೆ ಕೊಟ್ಟ ಇತರರು ಅಂದರೆ: ಹುರುಳಿ ಭೀಮರಾಯರು ಮತ್ತು ಅವರ ಅಣ್ಣ, ಐರೋಡಿ ಶಿವರಾಮಯ್ಯನವರು, ವೆಂಕಟರಮಣ ಹೆಬ್ಬಾರರು, ಮಂಜೇಶ್ವರ ಗೋವಿಂದ ಪೈಗಳು. ಮುದ್ದಣನ ಮೊದಲ ಓದು ಅನೇಕ ಸಂಸ್ಕೃತ ಗ್ರಂಥಗಳು, ಶಬ್ದಮಣಿದರ್ಪಣ, ಕಿಟ್ಟಲ್ ಪದಕೋಶ

ಬೆನೆಗಲ್ ರಾಮರಾಯರು ಮದರಾಸು ಬಿಟ್ಟು ಮಂಗಳೂರಿಗೆ ಹಿಂದಿರುಗುವ ಸಂದರ್ಭದಲ್ಲಿ ಮುದ್ದಣನಿಗೆ ಅವರ ಮದರಾಸಿನ ಕೆಲಸ ಕೊಡಿಸುವ ವ್ಯವಸ್ಥೆ ಮಾಡಿದರು. ಆದರೆ ಆಗಲೇ ಮುದ್ದಣನಿಗೆ ಕ್ಷಯ ರೋಗ ಅಂಟಿದ್ದರಿಂದ ಇನ್ನು ಅಲ್ಲಿ ಹೋಗಿ ಒದ್ದಾಡುವುದು ಬೇಡ ಅಂತ ಅವನೇ ಆಸಕ್ತಿ ತೋರಲಿಲ್ಲ

ಕವಿಯ ಕಾಲಾನಂತರ ತಂದೆಯೋ ಸೋದರನೂ ಹೆಂಡತಿಯೂ ಅವನ ಕೃತಿಗಳ ಬಗೆಗೆ ಆಸಕ್ತಿ ತೋರಲಿಲ್ಲ. ಹೀಗಾಗಿ ಮುದ್ದಣ ಕಾಲವಾದ ಬಹಳ ವರ್ಷಗಳ ನಂತರವೂ ಅವನ ಬಗೆಗೆ ಏನೂ ಚರ್ಚೆ ಆಗಿರಲಿಲ್ಲ. ಪುಣ್ಯ, ಕಾವ್ಯ ಮಂಜರಿ,ಮತ್ತು ಕರ್ನಾಟಕ ಕಾವ್ಯಕಲಾನಿಧಿ ಇದ್ದುದರಿಂದ ಅವನ ಮೂರು ಕೃತಿಗಳಾದರೂ ದೊರೆತು ಕವಿಯ ಬಗೆಗೆ ಚರ್ಚೆಗೆ ಆಸ್ಪದವಾಯಿತು

ಮುದ್ದಣ ಮುಂದೆ ಉಡುಪಿಯ ಕ್ರಿಶ್ಚಿಯನ್ ಶಾಲೆಯಲ್ಲಿ ಕನ್ನಡ ಅಧ್ಯಾಪಕರ ಹುದ್ದೆ ಖಾಲಿ ಇದೆ ಅಂತ ಅರಿವಾಗಿ ತುಸು ಸಂಬಳ ಹೆಚ್ಚು ಬರುತ್ತೆ ಅನ್ನುವ ಕಾರಣಕ್ಕೆ ತಾನೂ ಅರ್ಜಿ ಹಾಕಿದ. ಅವನಿಗೆ ಕೆಲಸವೂ ಸಿಕ್ಕಿತು. ಅಲ್ಲಿ ಕೆಲವು ತಿಂಗಳುಗಳ ಕಾಲ ಕೆಲಸ ಮಾಡಿದ ನಂತರ ಮಂಗಳೂರನಲ್ಲಿದ್ದ ಸರ್ಕಾರೀ ಶಾಲೆಗೆ ಕನ್ನಡ ಅಧ್ಯಾಪಕರ ಹುದ್ದೆಗೆ ಕರೆ ಬಂದಿತ್ತು. ಸಂದರ್ಶನಕ್ಕೆ ಹೋದೋರು ಇಬ್ಬರೇ: ಮುದ್ದಣ ಒಬ್ಬನಾದರೆ ಪಂಜೆ ಮಂಗೇಶರಾಯರು ಇನ್ನೊಬ್ಬರು. ಆದರೆ ಆಯ್ಕೆಯಾಗಿದ್ದು ಪಂಜೆ ಮಂಗೇಶರಾಯರು. ಅವನಿಗೆ ಪಂಜೆ ಮಂಗೇಶರಾಯರ ಪರಿಚಯವಾದದ್ದು ತುಂಬಾ ಸಂತೋಷವಾಗಿತ್ತು. ಆದರೆ ಅಲ್ಲಿ ಮುದ್ದಣ ಆಯ್ಕೆಯಾಗದೇ ಪದವೀಧರರು ಅನ್ನುವ ಕಾರಣಕ್ಕೆ ಪಂಜೆಯವರು ಆಯ್ಕೆಯಾದಾಗ ಪಂಜೆಯವರು "ಭತ್ತದ ಸಿಪ್ಪೆಯನ್ನು ಕುಟ್ಟುವ ಒನಕೆಯನ್ನು ಕನ್ನಡ ಕಲಿಸಲು ತಂದರು. ಆದರೆ ಚಿತ್ರ ಬಿಡಿಸುವ ಬಣ್ಣದ ಗರಿಯನ್ನು ಕಿವಿ ಕೊಳೆ ತೆಗೆಯುವ ಕುಗ್ಗೆ ಕಡ್ಡಿಯನ್ನಾಗಿ ಮಾಡಿದರು" ಅಂತ ನೊಂದು ನುಡಿದಿದ್ದರು. ಮುಂದೆ ಅವನು ಬರೆದ ರಾಮಾಶ್ವಮೇಧ ಕೃತಿಗೆ ತನ್ನನ್ನು ಚಿಕ್ಕಂದಿನಿಂದ ಮನೆಯವರು ಕರೆಯುತ್ತಿದ್ದ "ಮುದ್ದಣ" ಎನ್ನುವ ಹೆಸರನ್ನೇ ಇಟ್ಟ. ಆಗ ಕಾವ್ಯಮಂಜರಿ ಪತ್ರಿಕೆ ನಿಂತುಹೋಗಿತ್ತು. ಮುದ್ದಣನಿಗೆ ಬಹಳ ಬೇಸರವಾಗಿತ್ತು. ಈಗಿನಂತೆ ಆಗ ಅನೇಕ ಪತ್ರಿಕೆಗಳಿರಲಿಲ್ಲ. ಆದರೆ ಕೆಲವೇ ದಿನಗಳಲ್ಲಿ ರಾಮಾನುಜ್ಯೆಯಂಗಾರರು ನಾವು ಕರ್ನಾಟಕ ಕಾವ್ಯಕಲಾನಿಧಿ ಅನ್ನುವ ಪತ್ರಿಕೆ ಪ್ರಾರಂಭಿಸುತ್ತಿದ್ದೇವೆ ಅಂತ ಬರೆದಾಗ ಅದಕ್ಕೆ ಮುದ್ದಣ ತಾನು ರಚಿಸಿದ ಶ್ರೀ ರಾಮಾಶ್ವಮೇಧ ಕೃತಿಯನ್ನು ಕಳಿಸಿದ. ಕೃತಿ ತಲುಪಿದ ಮೇಲೆ ರಾಮಾನುಜ್ಯೆಯಂಗಾರರು ಕಾಗದ ಬರೆದು ನೀವು ಕಳಿಸಿದ ಮೂರೂ ಕೃತಿಗಳ ರಚನೆ, ಪದ ವಿನ್ಯಾಸ, ಪದ ಪುಂಜ ಎಲ್ಲದರಲ್ಲೂ ತುಂಬಾ ಸಾಮ್ಯವಿದೆ. ಇವು ಮೂರನ್ನೂ ಬರೆದವರು ಒಬ್ಬರೇ ಇರಬೇಕು ಅನ್ನುವ ಅನುಮಾನ ನಮಗಿದೆ. ರಾಮಾಶ್ವಮೇಧ ಬರೆದವರು ನೀವೇ ಇರಬೇಕು ಅಂತ ನಮ್ಮ ಊಹೆ. ಹಾಗಿದ್ದ ಮೇಲೆ ಹಿಂದಿನ ಎರಡು ಕೃತಿಗಳನ್ನು ಬರೆದವರೂ ನೀವೇ ಇರಬೇಕು ಅಂತ ಬರೆದರೂ ಅವನು ಬದಲು ಉತ್ತರ ಬರೆಯಲಿಲ್ಲ. ಆದರೆ ರಾಮಾಶ್ವಮೇಧ ಮಾತ್ರ ಅಚ್ಚಾಗಲಾರಂಭಿಸಿತು. ಆದರೆ ಅದು ಪೂರ್ಣವಾಗುವ ವೇಳೆಗೆ ಅವನು ಇರಲೇ ಇಲ್ಲ. ಕ್ಷಯ ರೋಗ ಅವನನ್ನು ಬಲಿ ತೆಗೆದುಕೊಂಡಿತ್ತು.

ಅವನ ಸಾಂಸಾರಿಕ ಸ್ಥಿತಿಗತಿಗಳ ಕಡೆಗೆ ಒಮ್ಮೆ ಗಮನ ಹರಿಸುವುದಾದರೆ, ಮುದ್ದಣನಿಗೆ ಒಂದು ಕೆಲಸ ಅಂತ ಆಯ್ತು ಅಂತ ಸಮಾಧಾನ ಹೊಂದಿದ ತಮ್ಮಯ್ಯ ಮಹಾಲಕ್ಷ್ಮಿ ದಂಪತಿಗಳು ಮುದ್ದಣನಿಗೆ ಶಿವಮೊಗ್ಗದ ಬಳಿಯ ಕಾಗೆಕೋಡಮಗ್ಗಿ ಗ್ರಾಮದ ಹುಡುಗಿ ಕಮಲ ಅನ್ನುವವಳನ್ನು ತಂದು ಮದುವೆ ಮಾಡೇ ಬಿಟ್ಟರು. ಪುಟ್ಟ ಮನೆ ಪುಟ್ಟ ಸಂಸಾರ. ಕಮಲ ಹೆಚ್ಚು ಓದಿದವಳಲ್ಲ. ಅವಳಿಗೆ ಅವನ ಸಾಹಿತ್ಯದ ಸಾಧನೆಯ ಬಗೆಗೆ ಹೆಚ್ಚಿನ ಒಲವು ಇರಲಿಲ್ಲ. ಆದರೆ ಇಷ್ಟಂತೂ ನಿಜ. ಎಳೆಯ ವಯಸ್ಸಿನ ಹೆಂಡತಿ ಕಮಲ ಅಕ್ಕ ಪಕ್ಕದ ಮನೆಯ ಹೆಂಗಸರ ಬಳಿ ಇರುವ ಸರ, ಬಳೆ, ಓಲೆ, ಸೀರೆ ಮುಂತಾದುವುಗಳನ್ನು ಕಂಡು ಅಂಥವು ನನಗೂ ಬೇಕು ಅನ್ನುವ ಆಸೆಯನ್ನು ಮುದ್ದಣನ ಬಳಿ ವ್ಯಕ್ತಪಡಿಸಿರಲಿಕ್ಕೆ ಸಾಕು. ಅವುಗಳನ್ನು ತೆಗೆದುಕೊಡಲು ಶಕ್ತನಲ್ಲದ ತನ್ನ ಸ್ಥಿತಿಯಿಂದ ಅವನಿಗೆ ಬೇಜಾರಾಗಿರುವುದಕ್ಕೂ ಸಾಕು. ಅದಕ್ಕೇ ಅವನು ಶ್ರೀ ರಾಮಾಶ್ವಮೇಧ ಕೃತಿ ಬರೆಯುವಾಗ ಒಂದು ಕಡೆ "ಎಳೆಯ ಹೆಂಡಿರ ಕೈಯಲ್ಲಿ ಸಿಕ್ಕು ನಲುಗುವ ಕವಿಗಳ ಬಾಳೇ ದೂಷ್ಯ" ಅಂತ ಬರೆದಿದ್ದಾನೆ. ಕೆಲವೇ ದಿನಗಳಲ್ಲಿ ಮುದ್ದಣ ತಂದೆಯಾದ. ಮನೆಯಲ್ಲಿ ಪುಟ್ಟ ಮಗು ಆಟಾಡಿಕೊಂಡಿರುವುದು ಅವನಿಗೆ ಸಂತಸ ತಂದು ಅವನ ಬಡತನವನ್ನೂ ಮರೆಸಿತು. ಆದರೆ ವಿಧಿಯಾಟವೇ ಬೇರೆ ಇತ್ತು.

ಮುಂದಿನ ಪುಟ ನೋಡಿ ...

ಕೆಮ್ಮು ಅಂತ ಶುರುವಾಗಿದ್ದು ಅವನಿಗೆ ಕೆಲವೇ ದಿನಗಳಲ್ಲಿ ಅದು ಕ್ಷಯ ರೋಗ ಅಂತ ಗೊತ್ತಾಯಿತು. ಆಗಿನ ಕಾಲದಲ್ಲಿ ಅದು ಸಾಂಕ್ರಾಮಿಕ ರೋಗ. ಒಬ್ಬರಿಂದೊಬ್ಬರಿಗೆ ಬಲು ಬೇಗ ಹರಡುತ್ತಿತ್ತು. ಕ್ಷಯ ರೋಗ ಬಂದವರನ್ನು ಒಂದು ಕೋಣೆಯಲ್ಲಿ ಕೂಡಿಹಾಕುತ್ತಿದ್ದರು. ಅವರ ಹತ್ತಿರ ಯಾರೂ ಸುಳಿಯುತ್ತಿರಲಿಲ್ಲ. ಊಟ, ತಿಂಡಿ ಎಲ್ಲ ಬಹಳ ದೂರದಿಂದಲೇ. ಅಂಥಾ ಭಯಾನಕ ಕಾಹಿಲೆ ಮುದ್ದಣನಿಗೂ ಬಂತು. ಆಗ ಮುದ್ದಣ ಯೋಚಿಸಿದ. ಈ ಹಾಳು ಕಾಹಿಲೆ ನನಗೆ ಬಂದಿದೆ ಇದು ಕಮಲೆಗೂ ಮಗು ರಾಧಾಕೃಷ್ಣನಿಗೂ ಬರದೇ ಇರಲಿ ಅಂತ ಏನೋ ಒಂದು ನೆಪ ಮಾಡಿ, ಕಮಲೆ ವಿರೋಧ ವ್ಯಕ್ತಪಡಿಸಿದರೂ ಬಲವಂತವಾಗಿ ಅವಳನ್ನೂ ಮಗುವನ್ನೂ ಅವಳ ತವರಿಗೆ ಸಾಗಹಾಕಿದೆ. ಅವರು ಊರಿಗೆ ಹೊರಟಾಗ ಮುದ್ದಣನಿಗೆ ಅನಿಸಿತ್ತು ನಾನು ಇವರಿಬ್ಬರನ್ನೂ ನೋಡುತ್ತಿರುವುದು ಇದೇ ಕಡೆಯ ಸಾರಿ ಅಂತ. ಉಕ್ಕಿಬಂದ ದುಖವನ್ನು ತಡೆದುಕೊಂಡು ಅವರನ್ನು ಸಾಗಹಾಕಿದ. ಇತ್ತ ರೋಗ ಉಲ್ಬಣವಾಗುತ್ತಾ ಬಂತು. ಚಿಕಿತ್ಸೆಗೂ ಹಣ ಇಲ್ಲ. ಕ್ಷಯರೋಗ ಬಂದ ಮೇಲೆ ಅವನು ಶಾಲೆಗೆ ಹೋಗಲಿಲ್ಲ. ಒಂದೆರಡು ತಿಂಗಳು ಮಾತ್ರ ಸಂಬಳ ಬಂತು. ಆಗ ಮುದ್ದಣ ತನ್ನ ಶಿಷ್ಯರಲ್ಲೊಬ್ಬನಾದ ರಾಜಗೋಪಾಲಕೃಷ್ಣ ಅನ್ನುವವನನ್ನು ಕರೆದು "ನೋಡು ಈ ಪುಸ್ತಕಗಳು, ಹಸ್ತಪ್ರತಿಗಳು ನನಗೆ ಇನ್ನು ಬೇಡ. ಇವುಗಳಿಂದ ನನಗೆ ಇನ್ನೇನೂ ಪ್ರಯೋಜನವಿಲ್ಲ. ಇದನ್ನು ನೀನು ತೆಗೆದುಕೊಂಡು ನಿನಗೆ ತೋಷಿದಷ್ಟು ಹಣ ಕೊಡು. ಅದು ನನಗೆ ಸಹಾಯಕವಾಗುತ್ತದೆ." ಅಂದ. ಕವಿಗೆ ಅಂಥಾ ಬಡತನ ಕಾಡುತ್ತಿದ್ದುದು ನಿಜ. ಏನೇ ಆದರೂ ಅವನಿಗೆ ಬಂದಂಥ ಕಾಯಿಲೆ ಯಾವ ಚಿಕಿತ್ಸೆಗೂ ಫಲಕಾರಿಯಾಗದೇ ಕೆಮ್ಮಿ ಕೆಮ್ಮಿ ರಕ್ತ ಕಾರಿಕೊಂಡು ಮುದ್ದಣ ಇಹಲೋಕ ವ್ಯಾಪಾರ ಮುಗಿಸಿದ. ಅಂದು 16.2.1901. ಕನ್ನಡ ಸಾರಸ್ವತ ಲೋಕದ ಮುಂಗೋಳಿ ಎಂದೇ ಕರೆಸಿಕೊಂಡ ಮಹಾನ್ ಕವಿಯೊಬ್ಬನ ದಾರುಣ ಅಂತ್ಯ ಹೀಗಾಯಿತು. ಆದರೆ ಮುದ್ದಣ ನಮ್ಮನ್ನಗಲಿ 107 ವರ್ಷಗಳೇ ಕಳೆದುಹೋಗಿದ್ದರೂ ಇಂದಿಗೂ ಅವನ ಕೃತಿಗಳ ಮುಖಾಂತರ ಕನ್ನಡ ಸಾರಸ್ವತ ಲೋಕದಲ್ಲಿ ಜೀವಂತವಾಗಿದ್ದಾನೆ ಎಂದರೆ ತಪ್ಪಲ್ಲ.

ಅವನ ಮರಣಾನಂತರ ಮುದ್ದಣನ ತಂದೆ ಮತ್ತು ತಮ್ಮ ಮನೆಯಲ್ಲಿ ಅಳಿದುಳಿದಿದ್ದ ಮುದ್ದಣನ ರಚನೆಗಳನ್ನು ಯಾವ ರೀತಿ ವಿಲೇವಾರಿ ಮಾಡಿದರೋ. ಅವುಗಳನ್ನು ಜೋಪಾನ ಮಾಡಬೇಕು, ಇವು ಕನ್ನಡ ಸಾರಸ್ವತ ಲೋಕದ ಅನರ್ಘ್ಯ ರತ್ನಗಳು ಅಂತ ಅವರಿಗೆ ಖಂಡಿತಾ ತಿಳಿದಿರಲಿಲ್ಲ. ಮುದ್ದಣ ಮಗ ರಾಧಾಕೃಷ್ಣ ಬೆಳೆದು ದೊಡ್ಡವನಾದ ಮೇಲೆ ಪ್ರಕಾಶಕರೊಬ್ಬರ ಬಳಿ ನಾನು ಮುದ್ದಣನ ಮಗ, ನನ್ನ ತಂದೆಯ ಕೃತಿಗಳ ಗೌರವಧನವೇನಾದರೂ ದೊರೆಯಬಹುದೇ ಅಂತ ವಿಚಾರಿಸುತ್ತಿದ್ದ ಅಂತಲೂ ಕೆಲವರು ಹೇಳುತ್ತಾರೆ. ಹೀಗೆ ಕವಿಗೆ ತನ್ನ ಕಾವ್ಯದಿಂದ ತನಗೂ ತನ್ನ ಕುಟುಂಬಕ್ಕೂ ಏನೂ ಉಪಯೋಗವಾಗಲಿಲ್ಲ ಅನ್ನೋದು ಸತ್ಯ. ಆದರೆ ಅವನ ಹೆಸರು ಮಾತ್ರ ಕನ್ನಡ ಸಾರಸ್ವತ ಲೋಕ ಇರುವವವರೆಗೂ ಅಜರಾಮರ ಅನ್ನೋದು ಸುಳ್ಳಲ್ಲ.

ಮುದ್ದಣನ ನೆನಪನ್ನು ಸದಾ ಹಸಿರಾಗಿಸಿರಬೇಕು ಎನ್ನುವ ಉತ್ಕಟಪೇಕ್ಷೆಯಿಂದ ನಂದಳಿಕೆಯವರೇ ಆದ ಶ್ರೀ ಬಾಲಚಂದ್ರರಾಯರು ಮೊದಲಿಗೆ ಮುದ್ದಣ ಸ್ಮಾರಕ ರೈತ ಸಂಘ ಅಂತ ಇದ್ದುದನ್ನು ಮುಂದೆ ಮುದ್ದಣ ಸ್ಮಾರಕ ಮಿತ್ರ ಮಂಡಳಿ ಅಂತ ಬದಲಾಯಿಸಿ 1979ರಲ್ಲಿ ಯುವಕರನ್ನೆಲ್ಲ ಸಂಘಟಿಸಿ ಮಹಾಲಿಂಗೇಶ್ವರ ದೇವಾಲಯಕ್ಕೆ ಬೇಕಾದ ಅನುಕೂಲತೆಗಳನ್ನು ಮಾಡುವುದರ ಜೊತೆಗೆ ಮುದ್ದಣನ ಹೆಸರನ್ನು ಜೀವಂತವಾಗಿಸುವ ಕಾರ್ಯದಲ್ಲಿ ತೊಡಗಿಕೊಂಡರು. ಮುದ್ದಣನ 125ನೇ ಜನ್ಮದಿನೋತ್ಸವವನ್ನು (1995) ಆಚರಿಸುವುದರ ಜೊತೆಗೆ ಮತ್ತೊಮ್ಮೆ ಮುದ್ದಣನ ಹೆಸರು ಅಜರಾಮರವಾಯಿತು. ಅದರ ಹಿಂದೆಯೇ ಮುದ್ದಣನ ಜನ್ಮಶತಮಾನೋತ್ಸವ (2000) ವನ್ನೂ ಆಚರಿಸಿತು. ಅದೇ ವರ್ಷ ಪುತ್ತೂರಿನ ಕರ್ನಾಟಕ ಸಂಘ ನಂದಳಿಕೆಯ ನಂದಾದೀಪಗಳು ಕೃತಿಯನ್ನು ಪ್ರಕಟಿಸಿತು. ಮಿತ್ರಮಂಡಲಿಯ ಬೆಳ್ಳಿಹಬ್ಬದ ಅಂಗವಾಗಿ 2004ರಲ್ಲಿ ನಂದಳಿಕೆಯ ನಂದನ ಪುಸ್ತಕವನ್ನು ಪ್ರಕಟಿಸಿತು. ನನ್ನ ಮಹಾಕವಿ ಮುದ್ದಣ ಪುಸ್ತಕ ಪ್ರಥಮಾವೃತ್ತಿ ಬಿಡುಗಡೆಯಾದದ್ದೇ ನಂದಳಿಕೆಯಲ್ಲಿ. ಇದು ನನ್ನ ಬದುಕಿನ ಒಂದು ಬಹುದೊಡ್ಡ ಭಾಗ್ಯ ಎಂದುಕೊಳ್ಳುತ್ತೇನೆ. ಆಗ ಡಾ. ಹಾ ಮಾ ನಾಯಕರು ನಂದಳಿಕೆಗೆ ಬಂದು ಪುಸ್ತಕ ಬಿಡುಗಡೆ ಮಾಡಿದರು. ಅದೇ ದಿನ ಉಡುಪಿಯ ಮುನಿಸಿಪಲ್ ಆಫೀಸ್ ಆವರಣದಲ್ಲಿ ಮುದ್ದಣನ ಪುತ್ಥಳಿಯನ್ನೂ ಅನಾವರಣಗೊಳಿಸಲಾಯಿತು. ಹೀಗೆ ನಂದಳಿಕೆ ಬಾಲಚಂದ್ರರಾವ್ ಅವರ ಮುಂದಾಳತ್ವದಲ್ಲಿ ನಂದಳಿಕೆಯನ್ನೂ ಒಳಗೊಂಡಂತೆ ದಕ್ಷಿಣ ಕನ್ನಡದಲ್ಲಿ ಮುದ್ದಣನ ನೆನಪನ್ನು ಅಜರಾಮರವಾಗಿಸುವ ಕಾರ್ಯ ನಿರಂತರವಾಗಿ ಸಾಗಿದೆ. ಬರೀ ಇದಷ್ಟೇ ಸಾಲದು ಮುದ್ದಣನ ಎಲ್ಲ ಕೃತಿಗಳ ಕುರಿತು ನಾಡಿನ ನಾನಾ ಕಡೆ ಸಾಹಿತ್ಯ ಗೋಷ್ಠಿಗಳು ನಡೆಯಬೇಕು, ಶ್ರೀ ರಾಮ ಪಟ್ಟಾಭಿಷೇಕ, ಅದ್ಭುತ ರಾಮಾಯಣ, ಶ್ರೀ ರಾಮಾಶ್ವಮೇಧ ಮುಂತಾದ ಕೃತಿಗಳ ಕುರಿತು ಉಪನ್ಯಾಸ ನಡೆಸಬೇಕು. ಇಂದಿನ ಪೀಳಿಗೆಗೆ ಮುದ್ದಣನ ಎಲ್ಲ ಕಾವ್ಯಗಳ ಪರಿಚಯವಾಗಬೇಕು. ನಾನಂತೂ ಯಾರು ಎಲ್ಲಿ ಕರೆದರೂ ಹೋಗಿ ಮುದ್ದಣನ ಬದುಕು ಮತ್ತು ಸಾಹಿತ್ಯದ ಬಗೆಗೆ ಉಪನ್ಯಾಸ ಕೊಡುತ್ತಿದ್ದೇನೆ. ಬೆಂಗಳೂರಿನ ಗಾಂಧೀ ಸಾಹಿತ್ಯ ಸಂಘದಲ್ಲಿ, ಗೋಖಲೆ ಇನ್ಸಿಟಿಟ್ಯೂಟ್ ಆಫ್ ಪಬ್ಲಿಕ್ ಅಫೇರ್ಸ್ ನಲ್ಲಿ ಹಾಗೂ ಬೆಳಗಾಂ ಸಾಹಿತ್ಯ ಕೂಟದಲ್ಲಿ ಉಪನ್ಯಾಸ ಕೊಟ್ಟಿದ್ದೇನೆ. ಇದೀಗ ನನ್ನ ಕೃತಿ ಮಹಾಕವಿ ಮುದ್ದಣ ಎರಡನೇ ಆವೃತ್ತಿ ಕೂಡಾ ಪ್ರಕಟವಾಗಿ ಅಪಾರ ಜನಮನ್ನಣೆ ಗಳಿಸಿದೆ. (ಆಸಕ್ತರ ಹೆಚ್ಚಿನ ಓದಿಗೆ – ಮಹಾಕವಿ ಮುದ್ದಣ (ಬದುಕು ಬರಹ) (ಪ್ರಕಾಶಕರು - ಸಪ್ನ ಬುಕ್ ಹೌಸ್) ಕಾದಂಬರಿಯನ್ನು ಓದಬಹುದು. ▪

ನಾಗೇಂದ್ರ ಅನಂತಮೂರ್ತಿ

"ಭಗವದ್ಗೀತೆ" ಎಂದ ಕೂಡಲೇ ಅದು ಹಿಂದೂ ಧರ್ಮಗ್ರಂಥ ಅನ್ನಿಸುವುದು ಸಹಜ. ಏಕೆಂದರೆ ಗೀತೆಯ ಹಿನ್ನಲೆ ಮಹಾಭಾರತ, ಅಲ್ಲದೆ ಮಹಾಭಾರತವು ಪಾಶ್ಚಿಮಾತ್ಯರ ಪ್ರಕಾರ ಚರಿತ್ರೆಯಲ್ಲದೆ ಒಂದು ಜನಾಂಗ ನಂಬಿಕೊಂಡಿರುವ ಪುರಾಣ ಮಾತ್ರ. ಹೀಗಾಗಿ ಅರ್ಥವತ್ತಾಗಿ ತಿಳಿದರೆ, ಭಗವದ್ಗೀತೆಯನ್ನು ಭಗವಂತನ ಗೀತೆಗಳು ಎಂದು ಅರ್ಥೈಸಬಹುದು.

ಸಾಂದರ್ಭಿಕವಾಗಿ ನೋಡಿದರೆ ಗೀತೆಯು ಕುರುಕ್ಷೇತ್ರವೆಂಬ ರಣರಂಗದಲ್ಲಿ ಅರ್ಜುನನಿಗೆ ಶ್ರೀ ಕೃಷ್ಣನು ಆತ್ಮಸ್ಥೈರ್ಯ ತುಂಬಿದ ಸನ್ನಿವೇಶದ್ದು. ಅರ್ಜುನನು ತನ್ನ ದುಷ್ಟ ದಾಯಾದಿಗಳ ವಿರುದ್ಧ ಯುದ್ಧ ಮಾಡಲು ಹಿಂಜರಿದಾಗ ಶ್ರೀ ಕೃಷ್ಣನು ಅರ್ಜುನನಿಗೆ "ಧರ್ಮಪಾಲನೆ" ಮಾಡೆಂದು ಸ್ನೇಹಿತನಾಗಿ ಓಲೈಸುವು ವಿವರಣೆಯುಳ್ಳದ್ದು.

ಧರ್ಮ ಎಂದೊಡನೆ ಎಲ್ಲರು ತಿಳಿಯುವಂತೆ ಹಿಂದೂ ಧರ್ಮವೇನಲ್ಲ, ಅದು ಅರ್ಜುನನ ಕ್ಷತ್ರಿಯ ಧರ್ಮ, ಮಾನವ ಧರ್ಮ ಅಥವಾ ಅವನ ಕರ್ತವ್ಯ. ಮಾಡಬೇಕಾದ ಸರಿಯಾದ ಕೆಲಸವೇ ಧರ್ಮವು. ಭಗವದ್ಗೀತೆಯು ಜ್ಞಾನ, ಕರ್ಮ, ಭಕ್ತಿ ಮತ್ತು ಯೋಗದ ಮೂಲಕ ಮೋಕ್ಷವನ್ನು ಹೊಂದುವ ದಾರಿ ತೋರುವ ಒಂದು ಬೋಧನೆ.

ರಣರಂಗದ ಸನ್ನಿವೇಶವು ಮಾನವ ಜೀವನದ ನೈತಿಕ ಹಾಗು ಮಾನಸಿಕ ಹೋರಾಟದ ಸಾಂಕೇತಿಕದಂತಿದೆ. ಗೀತೆಯಲ್ಲಿರುವ ೧೮ ಅಧ್ಯಾಯಗಳೂ ಮಾನವನ ದೇಹ ಮತ್ತು ಮನಸ್ಸಿಗೆ ಒಂದು ಚೌಕಟ್ಟು ನಿರ್ಮಿಸಿ ತರಬೇತಿ ಕೊಡುವ ಒಂದು ಸಾಧನವಾಗಿದೆ.

ಭಗವದ್ಗೀತೆಯು ಮಹಾಭಾರತದ ಕುರುಕ್ಷೇತ್ರ ಯುದ್ಧದ ಸಮದಲ್ಲಿ ಉಪದೇಶಿಸಿರುವುದು ಎನ್ನುವುದನ್ನು ಬಿಟ್ಟರೆ (ಅದೂ ಕೂಡ, ಸಾಂದರ್ಭಿಕವಾಗಿ ಮಾನವ ಜೀವನದ ಸಹಜ ಹೋರಾಟಗಳನ್ನು ಬಿಂಬಿಸುವುದಕ್ಕೆ) ಗೀತೆಯ ಕರೆಯೇ ನಿಸ್ವಾರ್ಥ ಕರ್ಮ. ಇದರಲ್ಲಿ ಮಾನವ ಧರ್ಮದ ಉಲ್ಲೇಖವೇ ಹೊರತು ಹಿಂದೂ ಧರ್ಮವೆಂದು ಉಲ್ಲೇಖವಿಲ್ಲ. ಹಾಗಾಗಿ ವಿಶ್ಲೇಷಿಸುವ ಮನಸ್ಸಿದ್ದಲ್ಲಿ ಕೇವಲ ಕೆಲವೇ ವಾಕ್ಯಗಳನ್ನು ಆಯ್ಕೆಮಾಡಿಕೊಂಡು ವಿಶ್ಲೇಷಿಸದೇ, ಇಡೀ ಗ್ರಂಥವನ್ನು ಒರೆಗೆ ಹಚ್ಚುವ ಕೆಲಸ ಮಾಡಬೇಕು. ಭಾರತ ದೇಶದ ಸತ್ಯದ ಹರಿಕಾರನೆಂದು ನಂಬುವ ಮಹಾತ್ಮ ಗಾಂಧೀಜೀಯೇ "ಗೀತೆ" ತಮ್ಮ ಆಧ್ಯಾತ್ಮಿಕ ನಿಘಂಟೆಂದು ಹೇಳಿದ್ದಾರೆ. ಅಲ್ಲದೆ ಹಲವಾರು ಪಾಶ್ಚಿಮಾತ್ಯರೂ ಕೂಡ ಗೀತೆಯ ಮಹತ್ವವನ್ನು ಕೊಂಡಾಡಿದ್ದಾರೆ.



ಗೀತೆಯ ಆಯ್ದ ಕೆಲವು ಉಲ್ಲೇಖಗಳು ಹೀಗಿವೆ ...

ಅಧ್ಯಾಯ ೩ ಶ್ಲೋಕ ೩೫

ತನ್ನ ನಿಯತ ಕರ್ತವ್ಯಗಳನ್ನು ತಪ್ಪಾಗಿಯಾದರೂ ನಿರ್ವಹಿಸುವುದು ಪರಧರ್ಮವನ್ನು ಪರಿಪೂರ್ಣವಾಗಿ ಮಾಡುವುದಕ್ಕಿಂತ ಉತ್ತಮವಾದದ್ದು. ಸ್ವಧರ್ಮದಲ್ಲಿ ನಾಶವು ಮತ್ತೊಬ್ಬರ ಧರ್ಮವನ್ನು ಆಚರಿಸುವುದಕ್ಕಿಂತ ಉತ್ತಮ.

ಅಧ್ಯಾಯ ೩ ಶ್ಲೋಕ ೪೫

ಕ್ರಿಯಾಶಾಲಿಯಾದ ಇಂದ್ರಿಯಗಳು ಜಡವಸ್ತುಗಳಿಗಿಂತ ಶ್ರೇಷ್ಠ. ಮನಸ್ಸು ಇಂದ್ರಿಯಗಳಿಗಿಂತ ಶ್ರೇಷ್ಠ. ಬುದ್ಧಿಯು ಮನಸ್ಸಿಗಿಂತಲೂ ಇನ್ನೂ ಬಹು ಶ್ರೇಷ್ಠ. ಆತ್ಮನು ಬುದ್ಧಿಗಿಂತಲೂ ಇನ್ನೂ ಶ್ರೇಷ್ಠ.

ಇವು ಕೆಲವೇ ಉದಾಹರಣೆಗಳು, ಇಂತಹ ಅಮೂಲ್ಯ ಸಾಲುಗಳಲ್ಲಿ ಮಾನವ ಜೀವನದ ಸಫಲತೆ ಸಾಧಿಸುವ ಸಾಧನೆಗಳನ್ನು ಕಾಣಬಹುದೇ ಹೊರತು ಮತ್ತೇನನ್ನೂ ಅಲ್ಲ ಅಲ್ಲವೇ!

ಇತ್ತೀಚೆಗೆ ಭಾರತ ಸರ್ಕಾರವು ಗೀತೆಯನ್ನು ರಾಷ್ಟ್ರೀಯ ಗ್ರಂಥವನ್ನಾಗಿ ಘೋಷಿಸುವ ವಿಷಯ ಪ್ರಸ್ತಾಪಿಸಿದೆ. ಇದರ ಅರ್ಥ ಎಲ್ಲರನ್ನೂ ಹಿಂದೂ ಧರ್ಮದ ಮತಾನುಯಾಯಿಯಾಗಿ ಎಂದೇನಲ್ಲವಲ್ಲ. ಗೀತೆಯ ಸಾರವನ್ನು ಎಲ್ಲರಿಗೂ ತಲುಪಿಸುವ ಒಂದು ಉತ್ತಮ ನಿರ್ಧಾರದಂತೆ ಸ್ವೀಕರಿಸಬೇಕಲ್ಲವೇ. ಇನ್ನು, ಭಾರತದಲ್ಲಿ ಸಂವಿಧಾನವೇ ರಾಷ್ಟ್ರೀಯ ಗ್ರಂಥವೆಂದಾದರೆ, ಅದು ಎಲ್ಲ ಭಾರತೀಯರಿಗೂ ಅನ್ವಯಿಸುವುದಾದರೆ ಜಮ್ಮು ಕಾಶ್ಮೀರದಲ್ಲಿ ಏಕೆ ಇದು ಅನ್ವಯಿಸುವುದಿಲ್ಲ ಹಾಗು ಮುಸಲ್ಮಾನರಿಗೇ ಏಕೆ ಬೇರೆ ಕಾನೂನು ...ಇತ್ಯಾದಿ ಪ್ರಶ್ನೆಗಳು ಸಹಜವಾಗೇ ಏಳುತ್ತವೆ. ಹಾಗಾದರೆ ಸಂವಿಧಾನವೇ ರಾಷ್ಟ್ರೀಯಗ್ರಂಥವೆಂಬುದು ಬರೀ ಕಡತದ ಮಾತಾಯಿತೆ? ಹೀಗಾಗಿ ಈ ರೀತಿ ವಿಮರ್ಶಿಸುವುದು ಉಚಿತವಾಗಲಾರದು. ಯಾವುದೇ ಒಂದು ಪುಸ್ತಕವು ತನ್ನ ಗುಣಾವಗುಣದ ಬಗ್ಗೆ ಮೆಚ್ಚುಗೆ-ಟೀಕೆಗೆ ತೆರೆದುಕೊಳ್ಳದಿದ್ದರೆ ಅದು ಜನರ ಮನಸನ್ನು ನಾಟಲಾರದು. ಈ ನಿಟ್ಟಿನಲ್ಲಿ, ಸುಮ್ಮನೇ ರಾಜಕೀಯ ಅಥವಾ ಇನ್ನಿತರ ಉದ್ದೇಶಕ್ಕೆ ಒಂದು ಪುಸ್ತಕವೇ ಬೇಡ ಅನ್ನುವುದರಲ್ಲಿ ಅರ್ಥವಿಲ್ಲ. ಗೀತೆಯನ್ನು ಮತ್ತು ಅದರ ಸಾರವನ್ನು ಅರ್ಥಮಾಡಿಕೊಳ್ಳದೆ ಸುಮ್ಮನೆ ವಾದಿಸುವುದರಿಂದ ಆಯಾ ಜನರಿಗೆ ನಷ್ಟವೇ ಹೊರತು, ಕಾಲಾತೀತವಾಗಿ ಉಳಿದಿರುವ ಗೀತೆಗಲ್ಲ. ರಾಷ್ಟ್ರೀಯ ಗ್ರಂಥವಾಗಲಿ ಬಿಡಲಿ, ಗೀತೆಯು ಒಂದು ಜ್ಞಾನ ಭಂಡಾರವೆಂಬುದರಲ್ಲಿ ಎರಡು ಮಾತಿಲ್ಲ. ▪

Mustafa Bülent Ecevit, the four-time Turkish prime minister, had said that the Gita's verses, which said that if one were morally right, one need not hesitate to fight injustice, had given him the courage to send Turkish troops to Cyprus. The Gita "is truly a book of the world. [The] Quran and [the] Bible can't be compared with [the] Gita, as they are specific to the religions - See more at: http://indianexpress.com/article/opinion/columns/global-gita/#sthash.uxo7Oskw.dpuf

ವಿಚಾರ ವಿಹಾರ

ಮಾಲು, ಅಡಿಲೈಡ್

'ನಂಬಿದನು ಪ್ರಹ್ಲಾದ ನಂಬದಿರ್ದನು ತಂದೆ'
ಇದು ಶ್ರೀಯುತ ಡಿ.ವಿ.ಜಿ. ರವರ ಕಗ್ಗವೊಂದರ ಮೊದಲನೆಯ ಸಾಲು.
ಅದರ ಮುಂದಿನ ಸಾಲುಗಳು?!
'ನಂಬಿಯುಂ ನಂಬದಿರುವ ಇಬ್ಬಂದಿ ನೀನು
ಕಂಬದಿನೊ ಬಿಂಬದಿನೊ ಮೋಕ್ಷವವರಿಗಾಯ್ತು
ಸಿಂಬಳದ ನೊಣ ನೀನು - ಮಂಕುತಿಮ್ಮ'

ಚೋಟುದ್ದ ಪ್ರಹ್ಲಾದ ಸರ್ವ ಶಕ್ತ ಪ್ರಭು ಶ್ರೀಹರಿ ಎಲ್ಲೆಲ್ಲಿಯೂ ಇರುವನೆಂದು ಬಲವಾಗಿ ನಂಬಿದ್ದ.
ಅವನ ಅಪ್ಪ ಹಿರಣ್ಯಕಶಪುವಿಗೆ ಅವನ ಸುಪುತ್ರನ ದೇವರಲ್ಲಿ ನಂಬಿಕೆ ಇರಲಿಲ್ಲ.
ಆದರೆ, ಈ ಇಬ್ಬರಿಗೂ ಕಂಬ ಸೀಳಿ ಬಂದ ಆ ದೈವದ ದರ್ಶನ ಆಯಿತು.

ಇಬ್ಬಂದಿತನ

ಮನುಷ್ಯ ಮಾತ್ರರಾದ ನಾವು ಅವರಿಬ್ಬರ ಹಾಗಲ್ಲ. ನಾವು ನಂಬಿಕೆ ಮತ್ತು ನಂಬದಿರುವಿಕೆಯ ನಡುವೆ ಸಿಕ್ಕಿರುವ ಸಿಂಬಳದ ನೊಣದಂತೆ ಎಂದಿದ್ದಾರೆ ಡಿ.ವಿ.ಜಿ ರವರು ಅವರ ಮಂಕುತಿಮ್ಮನ ಮೂಲಕ.

ಒಂದು ಕಥೆ.

ಕಾಡಿನಲ್ಲಿ ಯಾರೋ ಒಬ್ಬ ಹೋಗುತ್ತಿದ್ದ. ಯಾವುದೋ ವಿಷದ ಮುಳ್ಳಿನ ಮೇಲೆ ಕಾಲಿಟ್ಟ. ಆ ಮುಳ್ಳು ಬಲವಾಗಿ ಕಾಲಿನ ಪಾದಕ್ಕೆ ನೆಟ್ಟಿಕೊಂಡಿತು.

ಅಸಾಧ್ಯ ನೋವು ತಾಳಲಾರದೇ ಅಲ್ಲಿಯೇ ಕುಸಿದುಬಿದ್ದ. ಅದೇ ದಾರಿಯಲ್ಲಿ ಒಬ್ಬ ಊರು ವೈದ್ಯ ಹೋಗುತ್ತಿದ್ದ. ಇವನ ನರಳುವಿಕೆಯನ್ನು ನೋಡಿದ.

'ಅಯ್ಯಾ! ಬಹಳ ವಿಷವಾದ ಮುಳ್ಳು. ಈ ಮುಳ್ಳಿನ ಬಗ್ಗೆ ನಾನು ಚೆನ್ನಾಗಿ ಬಲ್ಲೆ. ನಿನಗೆ ಪ್ರಾಣಕ್ಕೆ ಅಪಾಯವಿದೆ, ಬೇಗನೆ ಮದ್ದು ಹಾಕಿ ಗುಣಪಡಿಸಬೇಕು.

ನನ್ನಲ್ಲಿ ಮದ್ದು ಇದೆ, ನಿನ್ನ ಕಾಲು ಇತ್ತ ಕೊಡು' ಎಂದು ತನ್ನ ಕೈ ನೀಡಿದ.

ಮುಳ್ಳು ನಾಟಿದವ ಅವನ ಕೈಯನ್ನು ತಡೆದು, 'ನೀನು ಹೇಳವುದನ್ನು ಹೇಗೆ ನಂಬಲಿ?! ನೀನು ನಿಜವಾದ ವೈದ್ಯನೆಂಬುದು ನನಗೆ ಖಾತರಿ ಆಗದ ಹೊರತು

ನಾನು ನನ್ನ ಕಾಲನ್ನು ನಿನಗೆ ಕೊಡಲಾರೆ. ನೀನು ಹಾಕುವ ಮದ್ದು ವಿಷ ಇಳಿಸುತ್ತದೆ ಎಂಬ ಭರವಸೆ ಬೇಕು' ಎಂದ.

ಆ ವೈದ್ಯ ನಕ್ಕು 'ಅಯ್ಯಾ, ನಾನು ಕೊಡುವ ಮದ್ದು ಸ್ವೀಕರಿಸು, ನಿನ್ನ ಸಂಕಟ ಎಷ್ಟು ಬೇಗನೆ ಪರಿಹಾರವಾಗುತ್ತದೆ ಎಂಬುದನ್ನು ನೋಡು ಬೇಕಾದರೆ. ಈಗಾಗಲೇ ವಿಷ ಮೇಲ್ಮುಖವಾಗಿ ನಿನ್ನ ಮೈಯೆಲ್ಲ ವ್ಯಾಪಿಸಲು ಶುರು ಆಗಿದೆ' ಎಂದ.

'ಅದು ನಿಜ ಇರಬಹುದು, ನಾನು ನನ್ನ ಕಾಲನ್ನು ಯಾರಿಗೋ ಒಪ್ಪಿಸುವ ಮೂರ್ಖನಲ್ಲ. ಮೊದಲು ನನ್ನ ಸಂಶಯ ಪರಿಹರಿಸು. ನೀನು ಎಷ್ಟು ವರ್ಷದಿಂದ ವೈದ್ಯ ವೃತ್ತಿ ಮಾಡುತ್ತಿದ್ದೀಯ? ಇದು ಯಾವ ಮುಳ್ಳು, ಏಕೆ ಇದು ಇಷ್ಟು ವಿಷ? ನಿಜವಾಗಲೂ ಈ ಮುಳ್ಳು ಅಷ್ಟು ವಿಷವಾಗಿದ್ದರೆ, ನಿನ್ನ ಊರಿನ ಜನಗಳು ಈ ಮುಳ್ಳಿನ ಗಿಡವನ್ನು ಏಕೆ ತರಿದು ಹಾಕಲಿಲ್ಲ? ನಾನು ಇನ್ನೂ ಹತ್ತು ಹಲವು ಪ್ರಶ್ನೆ ಕೇಳಬೇಕಿದೆ. ನಿನ್ನಿಂದ ಉತ್ತರ ಬಂದ ಮೇಲೆಯೇ...' ಅವನ ಕೊನೆಯ ವಾಕ್ಯ ಪೂರ್ಣ ವಾಗುವ ಮೊದಲೇ ಪ್ರಾಣ ಬಿಟ್ಟ.

ಇವನಿಗೆ ಅವನು ವೈದ್ಯ ಎಂಬು ಗೊತ್ತಾಯಿತು ಆದರೆ ಇವನಿಗೆ ಪುರಾವೆ ಬೇಕಿತ್ತು. ಇವನು 'ನಂಬಿಯೂ ನಂಬದಿರುವ ಇಬ್ಬಂದಿ' ಯ ಜಾತಿ.

'ವೈದ್ಯೋ ನಾರಾಯಣೊ ಹರಿಃ' ಎಂಬ ವಾಕ್ಯದಂತೆ, ನಮ್ಮ ಕಷ್ಟಕ್ಕೆ ಆಗಿ ಬರುವ ಮಹಾನ್ ವೈದ್ಯ ಆ ಜಗತ್ ಪ್ರಭುವನ್ನು ನಂಬಿ ಶ್ರದ್ಧೆಯಿಂದ ನಮ್ಮ ಕಾರ್ಯ ನಿರ್ವಹಿಸಬೇಕು. ಇಲ್ಲವೇ, ಹಿರಣ್ಯಕಶಪುವಿನಂತೆ 'ನಾನೇ ಸರ್ವ ಶಕ್ತ, ನನ್ನ ಕಾರ್ಯ ನಾನು ನಿರ್ವಹಿಸಬಲ್ಲೆ' ಎಂಬ ಪೂರ್ಣ ವಿಶ್ವಾಸದಿಂದ ಕಾರ್ಯೋನ್ಮುಖನಾಗಬೇಕು.

ಮಂಕುತಿಮ್ಮ ಹೇಳಿದಂತೆ ಖಂಡಿತವಾಗಿ 'ಇಬ್ಬಂದಿ' ಯಾಗಬಾರದು ಮತ್ತು 'ಸಿಂಬಳದ ನೊಣ' ವಾಗಬಾರದು.▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ನೋಂದಣಿ ಪುರಾಣವು

ಬದರಿ ನಾರಾಯಣ್ ಫೋನ್ ಮಾಡಿ 'ಮಾರ್ಚಲ್ಲಿ ವೈಫ್ ಸಮೇತ ಸಿಡ್ನಿಗೆ ಬನ್ನಿ' ಅಂದ್ರು. ವೀಸಾಗೆ ಅಪ್ಲೈ ಮಾಡಕ್ಕೆ ನಮ್ಮ ಮ್ಯಾರೇಜ್ ರಿಜಿಸ್ಟ್ರೇಷನ್ ಮಾಡಿಸ್ಬೇಕಾಗಿತ್ತು. ಸಬ್ ರಿಜಿಸ್ಟ್ರಾರ್ ಕಚೇರಿಗೆ ಹೋದೆ.

'ನಮ್ಮ ಮ್ಯಾರೇಜ್ ರಿಜಿಸ್ಟರ್ ಮಾಡಿಸಬೇಕಾಗಿತ್ತು' ಎಂದೆ.

'ನಿಮ್ಮ ಹೆಂಡತಿಯನ್ನು ಕರೆದುಕೊಂಡು ಬನ್ನಿ' ಎಂದ ಆ ಫಸ್ಟ್ ಡಿವಿಷನ್ ಕ್ಲರ್ಕ್.

'ಇವಳೇ ನನ್ನ ಹೆಂಡತಿ' ಪಕ್ಕದಲ್ಲೇ ಇದ್ದವಳನ್ನು ತೋರಿಸಿ ಹೇಳಿದೆ.

'ಇವರಾ?' ಆ ಕಡೆ ಬೊಟ್ಟು ಮಾಡುತ್ತಾ ನಂಬದವನಂತೆ ಕೇಳಿದ. ನನಗೂ ಡೌಟ್ ಬಂತು. ಪಕ್ಕ ತಿರುಗಿ ನೋಡಿದೆ.

ಪಕ್ಕದಲ್ಲಿ ಇದ್ದದ್ದು ಒಂದು ಎಪ್ಪತ್ತರ ಅಜ್ಜಿ!

ಆ ಕಚೇರಿಯ ನೂಕುನುಗ್ಗಲಲ್ಲಿ ನನ್ನ ಹೆಂಡತಿ ಕಳೆದುಹೋಗಿದ್ದಳು.

ರಾಮ ಎಂದು ಹೆಸರಿಟ್ಟುಕೊಂಡಮೇಲೆ ಹೆಂಡತಿಯನ್ನು ಹುಡುಕುವುದು ಪರಂಪರಾಗತವಲ್ಲವೇ! ಆ ರಾಮನಿಗಾದರೋ ಹೆಂಡತಿ ಹುಡುಕಲು ಒಂದು ಕಪಿಸೈನ್ಯವೇ ಇತ್ತು. ನನ್ನ ಹೆಂಡತಿಯನ್ನು ಹುಡುಕಿಕೊಡಲು ಯಾವ ಕೋತಿಯೂ ಸಿಗಲಿಲ್ಲ.

ಅರಸುತ್ತಾ ಹೋದೆ. ಕಚೇರಿಯ ಮೂಲೆಯಲ್ಲಿ ನಾಲ್ಕು ಧಡೂತಿ ಹೆಂಗಸರ ಮಧ್ಯೆ ರೋಟಿ ಮೇಕರ್ ನಲ್ಲಿ ಸಿಲುಕಿದ ಹಿಟ್ಟಿನಂತೆ ಅಪ್ಪಚ್ಚಿಯಾಗುವ ಹಂತ ತಲುಪಿದ್ದ ಅವಳನ್ನು ಆ ಗುಂಪಿನ ಒತ್ತಡದಿಂದ ಬಿಡಿಸಿಕೊಂಡು ಬಂದೆ.

'ಇವರಾ?' ಮತ್ತೆ ಕೇಳಿದ ಆ ಫಸ್ಟ್ ಡಿವಿಷನ್ ಕ್ಲರ್ಕ್.

'ಇವರೇ' ಹೆಮ್ಮೆಯಿಂದ ನುಡಿದೆ.

ಅವನು ನನ್ನನ್ನೊಮ್ಮೆ, ನನ್ನ ಹೆಂಡತಿಯನ್ನೊಮ್ಮೆ ಅಡಿಯಿಂದ ಮುಡಿಗೆ, ಮುಡಿಯಿಂದ ಅಡಿಗೆ ನೋಡಿದ. ಮತ್ತೆ ಮತ್ತೆ ನೋಡಿದ.

'ಇವರೇನಾ?' ಮತ್ತೊಮ್ಮೆ ಕೇಳಿದ.

'ವೈ ಡೂ ಯೂ ಡೌಟು?'

'ಬರ್ದೇ ಇರ್ತದಾ? ನಿಮ್ಮ ಮುಖ ನೋಡ್ಕೊಳಿ ಹೋಗಿ' ಎನ್ನಬೇಕೆ ಅವನು!

ಪಾಪ! ಅವನದೂ ತಪ್ಪಿಲ್ಲ. ಎಷ್ಟಾದರೂ ಫಸ್ಟ್ - ಮೊದಲಿಗೇ; ಡಿವಿಷನ್ - ಭಿನ್ನಾಭಿಪ್ರಾಯವ ಮೂಡಿಸುವ; ಕ್ಲರ್ಕ್! ಅಲ್ಲದೆ ನಾವು ಇದ್ದದ್ದೂ ಹಾಗೆಯೇ ಅನ್ನಿ.

ನನ್ನಾಕೆ ಎಂದಿಗೂ ಬೇಡಿಕೆ ಕಳೆದುಕೊಳ್ಳದೆ ಚಿರಯೌವನ ಹೊಂದಿರುವ ಹಿಂದಿ ಚಿತ್ರತಾರೆ ರೇಖಾಳ ಪ್ರತಿರೂಪ.

ಅವಳದು ಫಳಫಳ ಹೊಳೆಯುವ ಕಣ್ಣು.

ನನ್ನ ಒಂದು ಕಣ್ಣು ಸಿಡ್ನಿ ನೋಡಿದರೆ ಇನ್ನೊಂದು ರಷ್ಯಾ ನೋಡುತ್ತಿರುತ್ತದೆ.

ಅವಳದು ಶಾಂಪೂ ಜಾಹಿರಾತಿನಲ್ಲಿ ತೋರಿಸುವಂತಹ ಜಲಪಾತದಂತೆ ಕೆಳಗುರುಳುವ ಕೇಶರಾಶಿ.

ನನ್ನದು? ಇದ್ದರಲ್ಲವೇ ವರ್ಣನೆ! ರಾತ್ರಿ ಡ್ರೈವ್ ಮಾಡುವಾಗ ಎದುರಿನ ಎಷ್ಟೋ ಲಾರಿಗಳು ನನ್ನ ತಲೆಯ ಮೆರುಗನ್ನು ತಗ್ಗಿಸಲು ವಿನಂತಿಸುವಂತೆ ತಮ್ಮ ಹೆಡ್ ಲೈಟ್ ಗಳನ್ನು ಡಿಮ್ & ಡಿಪ್ ಮಾಡುತ್ತವೆ. ಫಿಲ್ಮ್ ಷೂಟಿಂಗ್ ಇರೋ ಜಾಗದಲ್ಲಿ ಟೋಪಿ ಧರಿಸದಿದ್ದರೆ, ರಿವರ್ಸ್ ಫ್ಲಾಷ್ ಆಗುವುದರಿಂದ, ನನ್ನನ್ನು ಹತ್ತಿರಕ್ಕೇ ಸೇರಿಸುವುದಿಲ್ಲ.

ಅವಳು ನಕ್ಕರೆ ಹಾಲು ಸಕ್ಕರೆ.

ನಾನು ನಕ್ಕರೆ ಕೋಳಿ ಕೊಕ್ಕರೆ!

ನಮಗೂ, ಒಬಾಮನ ತಂದೆತಾಯಿಗಳಿಗೂ ಬಹಳವೇ ಸಾಮ್ಯ.

ಹೆಂಡತಿ ಹುಣ್ಣಿಮೆ, ಗಂಡ ಅಮಾವಾಸ್ಯೆ.

'ನೀವೇ ಗಂಡ-ಹೆಂಡತಿ ಅನ್ನಕ್ಕೆ ಏನಿದೆ ಪ್ರೂಫ್?' ಕೇಳಿದ ಆ ಮೊದಗು(ಮೊದಲ ದರ್ಜೆಯ ಗುಮಾಸ್ತೆ)

ನಮ್ಮ ವಿವಾಹದ ಲಗ್ನಪತ್ರಿಕೆಯನ್ನು ತೋರಿಸಿದೆ.

ಮುಂದಿನ ಪುಟ ನೋಡಿ ...

‘ನೂರು ರೂಪಾಯಿ ಬಿಸಾಕಿದ್ರೆ ಈ ತರಹದ್ ಇನ್ವಿಟೇಷನ್ ಯಾವ ಪ್ರಿಂಟಿಂಗ್ ಪ್ರೆಸ್ನವ್ನು ಬೇಕಾದ್ರೂ ಮಾಡ್ಕೊಡ್ತಾನೆ!’

‘ಮದುವೆಗೆ ಬಂದಿದ್ದ ನಮ್ಮಿಬ್ಬರ ಕಡೆಯ ಸಾಕ್ಷಿಗಳನ್ನು ಕರೆದುಕೊಂಡು ಬಂದಿದ್ದೇನೆ’

‘ಸಾಕ್ಷಿಗಳ ರೇಟು ಐನೂರು. ನಿಂತ ಜಾಗದಲ್ಲೇ ಕರಿಸ್ಲಾ?’ ಮೊದಗುವಿನ ಸವಾಲು!

‘ರೀ... ಕಾಂಚಾಣಂ ಕಾರ್ಯಸಿದ್ಧಿಃ’ ನೆನಪಿಸಿದಳು ಭಾರ್ಯೆ.

ಚಂಚಲ ಲಕ್ಷ್ಮಿ ನನ್ನ ಜೇಬಿನಿಂದ ಮೊದಗುವಿನ ಕೈಗೆ ವರ್ಗವಾದಳು.

ಮೊದಗುವಿನ ಮುಖ ಬಿಸಿಯೆಣ್ಣೆಯಲ್ಲಿ ಬಿದ್ದ ಹಪ್ಪಳದಂತೆ ಅರಳಿತು.

‘ನೋಡಪ್ಪಾ, ನಾನೇ ಗಂಡ, ಈಕೆಯೇ ನನ್ನ ಹೆಂಡತಿ. ಅಲ್ಲಿ ನಿಂತಿದ್ದಾರಲ್ಲಾ, ಅವರೇ ನಮ್ಮ ಮಕ್ಕಳು’ ಎಂದೆ.

‘ಎಂಥ ಹೆಣ್ಣಿಗೆ ಎಂಥ ಮುಸುಡಿ ಗಂಟುಬಿದ್ದಿದೆ. ಸಧ್ಯ! ಮಕ್ಕಳು ಅಮ್ಮನ್ನ ಹೋತಿರೋದ್ರಿಂದ ಬಚಾವ್!’ ಸಣ್ಣದಾಗಿ ಗೊಣಗಿದ. ಹೆಂಡತಿ ನಕ್ಕಳು.

‘ಏನೆಂದೇ?’ ಎಂದು ಘರ್ಜಿಸಿದೆ.

‘ಏನಿಲ್ಲ. ಐನೂರಕ್ಕೆಲ್ಲ ಆಗಲ್ಲಾಂದೆ’

ಚಂಚಲ ಲಕ್ಷ್ಮಿ ಮತ್ತೊಮ್ಮೆ ಹಾರಿದಳು.

ಮೊದಗುವಿನಿಂದ ಸಬ್ ರಿಜಿಸ್ಟ್ರಾರ್ ಮುಂದಿನ ಕುರ್ಚಿಗೆ ನಮಗೆ ಬಡ್ತಿ ದೊರೆಯಿತು.

ಸಬ್ ರಿಜಿಸ್ಟ್ರಾರ್ ನಮ್ಮ ಅರ್ಜಿಯನ್ನು ಶಂಕಿತ ಉಗ್ರರನ್ನು ಸ್ಪೆಷಲ್ ಟಾಸ್ಕ್ ಫೋರ್ಸ್ ನವರು ನೋಡುವಂತೆ ಸಂಪೂರ್ಣ ಗುಮಾನಿಯಿಂದ ನೋಡುತ್ತಿದ್ದರು.

‘ಸಾಕ್ಸಿ ಬಂದವ್ರೇನಯ್ಯಾ?’

‘ಮಕ್ಕಳೇ ಇದಾರೆ ಸಾರ್’

‘ಸುಮ್ಕಿರ್ರಿ. ನಿಮ್ ಮದ್ವೇನಾಗೆ ಇದ್ದೋವ್ರ್ ಮಾತ್ರ ಸಾಕ್ಸಿ, ಮಕ್ಳಾಗಾಕಿಲ್ಲ’

‘ನಮ್ಮ ತಂದೆ ತಾಯಿ ಇದ್ದಾರೆ ಸಾರ್’

‘ಅವರೇ ನಿಮ್ಮ ತಂದೆ, ತಾಯಿ ಅನ್ನಕ್ಕೆ ಸಾಕ್ಸಿ?’

ಸಾವಿರದ ಒಂದು ನೋಟು ಹೊರಬಿತ್ತು.

‘ಓಕೆ. ಒಪ್ಕೊಂಬಾಣ. ಎಲ್ಲಿ, ಆ ಇನ್ವಿಟೇಸನ್ ಇತ್ತ ಕೊಡಿ’

ಕೊಟ್ಟೆ. ವಿಜ್ಞಾನಿ ಹೊಸ ಬ್ಯಾಕ್ಟೀರಿಯಾವನ್ನು ಪರೀಕ್ಷಿಸುವಂತೆ ಪರೀಕ್ಷಿಸಿದ ಸಬ್ ರಿಜಿಸ್ಟ್ರಾರ್ ‘ಒಂದು ಕ್ಯಲ್ಸ ಮಾಡ್ರಪಾ. ನೀವು ಮದ್ವಿ ಆದ ಸೌಲ್ಭ್ರೀನಾಗೆ ರಿಕಾಲ್ಡ್ ಇರ್ತದೆ. ಅದರದೊಂದು ಎಕ್ಸ್ ಟ್ರಾಕ್ಟ್ ತಗಂಬನ್ನಿ’ ಎಂದರು.

‘ಸಾಧ್ಯವಿಲ್ಲ ಸಾರ್’

‘ಯಾಕೆ?’

‘ಆ ಚೌಲ್ಟ್ರಿ ಒಡೆದು ಅಲ್ಲಿ ಮಾಲ್ ಕಟ್ಟಿದಾರೆ’

‘ಅಂಗಾದ್ರೆ ನಾವು ಲಿಜಿಸ್ಟ್ರಿ ಮಾಡಕ್ಕಾಗಾಕಿಲ್ಲ’ ಎನ್ನುತ್ತಾ ಸಬ್ ರಿಜಿಸ್ಟ್ರಾರ್ ಒಳಕೋಣೆ ಸೇರಿದರು.

ಜೇಬಿನಿಂದ ಮತ್ತಷ್ಟು ನೋಟುಗಳನ್ನು ಹೊರತೆಗೆದೆ. ತಿಪ್ಪೆಯ ವಾಸನೆಗೆ ಸೊಳ್ಳೆ, ನೊಣ ಬರುವಂತೆ ಸಬ್ ರಿಜಿಸ್ಟ್ರಾರ್ ಹೊರಬಂದರು.

‘ಅದೆಲ್ಲಾ ಅಂಗಿರ್ಲಿ. ನೀವು ಗಂಡ-ಎಡ್ತೀಂತ ಎಂಗೆ ನೆಂಬೋದು?’

‘ಬಡ್ಕೊಂಡೆ ನಿಮ್ಗೆ. ಆ ಸಿಡ್ನಿಯೂ ಬೇಡ, ಮೆಲ್ಬೋರ್ನೂ ಬೇಡಾಂತ. ಎಲ್ಲಿ ಕೇಳ್ತೀರ ನನ್ನ ಮಾತು. ಮದುವೆಗೆ ಮೊದಲೇ ನಮ್ಮಪ್ಪ ‘ಬೇಡ ಮಗಳೆ; ಸಾಹಿತಗಳ ಸಹವಾಸ ಹೆಂಡತಿ ಮಕ್ಕಳ ಉಪವಾಸ ಅಂತ ಗಾದೇನೇ ಇದೆ’ ಅಂತ ಬುದ್ಧಿ ಹೇಳಿದ್ರು. ಅವರ ಮಾತು ಕೇಳಿದ್ದಿದ್ರೇ....’ ಎಂದು ಖಾರಾವೇಷದಿಂದ ನುಡಿದು ಹೊರನಡೆದಳು ಮಡದಿ. ನಾನು ಮಾತು ಹೊರಡದೆ ಮುದುಡಿ ಕುಳಿತೆ.

‘ಏಯ್ ಮೊದಗು, ಆಯಮ್ಮ ಇಂಗೆ ಬಯ್ಯೋದು, ಈವಯ್ಯ ಇಂಗೆ ಮುದುರ್ಕಂಡಿರೋದು ನ್ಯಾಡಿದ್ರೆ ಗಂಡ-ಎಂಡ್ರೇ ಸೈ ಬುಡಯ್ಯ’ ಒಪ್ಪಿಗೆ ಇತ್ತರು ಸಬ್ ರಿಜಿಸ್ಟ್ರಾರ್.

ನಾನು ಮಡದಿಯನ್ನು ಅರಸಿ ಹೊರಗೆ ಬಂದೆ. ‘ರೀ, ನೀವು ನನ್ನ ಪ್ರತಿ ವಾಕ್ಯಕ್ಕೂ ಐನೂರು ಕೊಡ್ತಾ ಬನ್ನಿ. ಹತ್ತೇ ನಿಮಿಷದಲ್ಲಿ ಸರ್ಟಿಫಿಕೇಟ್ ಕೊಡಿಸ್ತೀನಿ’ ಎಂದಳು ಮಡದಿ. ಅಸ್ತು ಎಂದೆ.

ಮತ್ತೆ ಸಬ್ ರಿಜಿಸ್ಟ್ರಾರ್ ಮುಂದೆ ಕುಳಿತೆವು.

‘ಸಾರ್, ಇತ್ತೀಚೆಗೆ ಮಾತಿನಿಂದಲೇ ತುಂಬಾ ಫೇಮಸ್ ಆಗಿರೋವ್ರೊಬ್ರು ನಿಮ್ಮ ತರಹವೇ ಮಾತಾಡ್ತಾರೆ ಸಾರ್. ನೀವು ಥೇಟ್ ಅವರೇ ಸಾರ್’ ಎಂದಳು ಮಡದಿ.

ಐನೂರು ಮುಂದಿಟ್ಟೆ.

ಸಬ್ ರಿಜಿಸ್ಟ್ರಾರ್ ಮುಖ ಕಾದ ಎಣ್ಣೆಗೆ ಬಿದ್ದ ಸಂಡಿಗೆ.

ಮುಂದಿನ ಪುಟ ನೋಡಿ ...

‘ಸಾರ್, ನಿಮ್ಮ ನಡವಳಿಕೆ ಕಂಡರೆ ಜಗ್ಗೇಶ್ ಫಿಲ್ಮ್ ಟೈಟಲ್ ಒಂದು ಜ್ಞಾಪಕಕ್ಕೆ ಬರತ್ತೆ ಸಾರ್. ನಿಮ್ಮದೂ ಅದೇ ಗುಣ ಸಾರ್’ ಹೊಗಳುವ ದನಿಯಲ್ಲಿ ಉಲಿದಳು ನನ್ನಾಕೆ.

ಇನ್ನೊಂದು ಐನೂರು ಮುಂದಿಟ್ಟೆ.

‘ಏಯ್ ಮೊದಗು, ಇವರ ಸಲ್ಟಿಪಿಕೇಟ್ ರಡಿ ಮಾಡಯ್ಯ’

‘ಸಾರ್, ರೆಡ್ ರೋಸ್ ಹಿಂದಿ ಪಿಕ್ಚರ್ ನಲ್ಲಿ ಲಾಸ್ಟ್ ಸೀನ್ ನಲ್ಲಿ ರಾಜೇಶ್ ಖನ್ನಾ ಥೇಟ್ ನಿಮ್ಮ ತರಹಾನೇ ಇದ್ದ ಸಾರ್’

ಮಗದೊಂದು ಐನೂರು ಮುಂದಿಟ್ಟೆ.

ಸಬ್ ರಿಜಿಸ್ಟ್ರಾರ್ ಸೀಲ್ ಹಾಕಿ, ಸೈನ್ ಹಾಕಿ ‘ಬಾಳ ಒಳ್ಳೇವ್ರಮ್ಮ ನೀವು. ನೀವು ನೆಕ್ಸ್ಟ್ ಥೇಮೂ ಲಿಜಿಸ್ಟರ್ ಮ್ಯಾರೇಜ್ ಆಗ್ಬೇಕಂದ್ರೆ ನನ್ತಾವೇ ಬನ್ನಿ. ಬಿರ್ನೆ ಮಾಡ್ಕೊಡ್ತೀನಿ’ ಎಂದರು.

ಸರ್ಟಿಫಿಕೇಟ್ ಪಡೆದು ಇಬ್ಬರೂ ಹೊರಬಂದೆವು.

‘ರಾಜೇಶ್ ಖನ್ನಾ ತರಹ ಇದೆಯಾ ಈ ಮೂತಿ?’

‘ರೆಡ್ ರೋಸ್ ನಲ್ಲಿ ರೀ. ಲಾಸ್ಟ್ ಸೀನ್. ಅದರಲ್ಲಿ ಅವನು ಫುಲ್ ಮೆಂಟಲ್ ಆಗಿರ್ತಾನೆ. ಇವನೂ ಹಾಗೇಂದೆ’ ನಸುನಕ್ಕಳು ಮಡದಿ.

‘ಜಗ್ಗೇಶ್ ಫಿಲ್ಮ್ ಟೈಟಲ್?’

‘ತರ್ಲೆ ನನ್ಮಗ!’

‘ಈಗ ಮಾತಿನಿಂದಲೇ ಫೇಮಸ್ ಆಗಿರೋವ್ರು?’

‘ಹುಚ್ಚ ವೆಂಕಟ್!’

ಹೊಗಳಿದಂತೆ ಮಾಡಿ, ಬೈದು, ಸರ್ಟಿಫಿಕೇಟ್ ಗಿಟ್ಟಿಸಿದ ಅವಳಿಗೆ ಜೈ ಎಂದೆ.

‘ನಡೀರಿ, ಫಾರಿನ್ಗೆ ಹೋಗೋದೂಂದ್ರೆ ಹುಚ್ಚಾಪಟ್ಟೆ ಶಾಪಿಂಗ್ ಇರತ್ತೆ’ ಎಂದು ಆರ್ಡರಿಸಿದಳು ಆಕೆ.

ನಾನು ಬಸವನ ಹಿಂದೆ ಬಾಲವಾದೆ. ▪

ಸುಮ್ಕೆ ನಕ್ಬಿಡಿ



ನನ್ನ ಎಲ್ಲಾ ಕಷ್ಟ-ಕಾರ್ಪಣ್ಯ, ಮನದ ವೇದನೆ,
ಅಂತರಂಗ ಬಹಿರಂಗವಾಗಿ ಬಿಡಿಸಿದ್ದೀನಿ ನೋಡಿ



ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: **horanadachilume@gmail.com**

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ಬುದ್ಧಿ ಮಾತು

ಕನಕಾಪುರ ನಾರಾಯಣ



ಮನೆಯ ಮುಂದಿನ ಬೇಲಿಯ ಹಿಂದೆ ಒಣಗಿ ಹೋಗಿದ್ದ ದೊಡ್ಡ ಮರವೊಂದು ಇತ್ತು.ಮನೆಯ ಮಾಲೀಕನಿಗೆ ಪಕ್ಕದ ಮನೆಯವನು"ಒಣಗಿದ ಮರ ಮನೆಯಮುಂದಿರುವುದು ಒಳ್ಳೆಯದಲ್ಲ,ಏನೋ ಅನಾಹುತ ಆಗುವ ಮೊದಲು ಅದನ್ನು ಕತ್ತರಿಸಿ"ಎಂದ. ಅದರಂತೆ ಮಾಲೀಕ ಒಣಗಿದ್ದ ಮರವನ್ನು ಕೆಡವಿದ.ಬೇಲಿಯಿಂದ ಹೊರಗೆ ಎಳೆದು ರಸ್ತೆಯ ಬದಿಗೆ ತಂದು ಹಾಕಿದ.ಪಕ್ಕದ ಮನೆಯವನು ತನ್ನ ಮಗನೊಡನೆ ಬಂದು"ಹಾಗಾದರೆ ಈ ಮರ ನಿಮಗೆ ಬೇಡಾ?"ಎಂದ.ಅದಕ್ಕೆ ಉತ್ತರ ಏನು ಹೇಳಬೇಕೆಂದು ತೋಚದೆ"ಊಹು"ಎಂದ.ಕೂಡಲೇ ಪಕ್ಕದಮನೆಯಾತ ತನ್ನ ಮಗನ ಸಹಾಯದಿಂದ ತಮ್ಮ ಮನೆಗೆ ಎಳೆದುಕೊಂಡು ಹೋಗಿ ಒಲೆ ಉರಿಸಲು ಬಳಸಲು,ಕತ್ತರಿಸಲಾರಂಭಿಸಿದ. "ಮರ ಕಡಿದ್ದಿದ್ದಕ್ಕೆ ಯಾವ ಒಳ್ಳೆಯದೂ ನನಗಾಗಲಿಲ್ಲ,ಆದರೆ ಪಕ್ಕದಮನೆಯವನಿಗೆ ಆಗಿದ್ದು ಖಂಡಿತ"ಎಂದು ಪೆಚ್ಚಾಗಿ ಕುಳಿತ. ನೀತಿ: ಬುದ್ಧಿವಂತರು ಒಳ್ಳೆಯ ಮಾತಿನಿಂದ ಬೇರೆಯವರ ಕೈಯಲ್ಲಿಯೇ ತಮ್ಮ ಕೆಲಸವನ್ನೂ ಮಾಡಿಸಿಕೊಳ್ಳಬಲ್ಲರು. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ “ಚಕ್ಕೆ ಮೊಗ್ಗು”

ಸುದರ್ಶನ್. ಏನ್
ಇವರ “ಅನಿವಾಸಿ”



ಬದರಿ ತ್ಯಾಮಗೊಂಡ್ಲು
ಇವರ “ಕಾವ್ಯ ಕಸ್ತೂರಿ”

ಸ್ಮಿತಾ ಮೇಲ್ಕೋಟೆ
ಇವರ “ಮಂದಹಾಸ”

ಕೇಸರಿ ಬಾದಾಮ್ ಕುಲ್ಫಿ

ಬೇಕಾಗುವ ಸಾಮಗ್ರಿಗಳು

- ಹಾಲಿನ ಪುಡಿ 50ಗ್ರಾಂ, ನೀರು ಅರ್ಧ ಲೀಟರ್
- ಜೋಳದಹಿಟ್ಟು 1 ಚಮಚ, ಖೋವಾ 50 ಗ್ರಾಂ
- ಕೇಸರಿ 1 ಚಿಟಿಕೆ, ಹತ್ತು ಬಾದಾಮಿ ಚೂರು
- ಸಕ್ಕರೆ 75ಗ್ರಾಂ, ಐಸ್ ಕ್ರೀಮ್ ಎರಡು ಕಪ್

ಮಾಡುವ ವಿಧಾನ

- ನೀರಿನೊಂದಿಗೆ ಹಾಲಿನ ಪುಡಿ ಬೆರೆಸಿ,ಸಕ್ಕರೆ ಕೇಸರಿ ಸೇರಿಸಿ ಹತ್ತು ನಿಮಿಷ ಕುದಿಸಿ
- ಖೋವಾ ಮತ್ತು ಬಾದಾಮಿಯನ್ನು ಹಾಕಿ ಮತ್ತೆ ಹತ್ತು ನಿಮಿಷ ಕುದಿಸಿ
- ಜೋಳದ ಹಿಟ್ಟನ್ನು ಮೂರು ಚಮಚ ನೀರಿನಲ್ಲಿ ಬೆರೆಸಿ,ಐಸ್ ಕ್ರೀಮ್ ಅನ್ನೂ ಮಿಶ್ರಣಕ್ಕೆ ಸೇರಿಸಿ ಮತ್ತೆ ಹತ್ತು ನಿಮಿಷ ಕುದಿಸಿ
- ಒಲೆಯ ಮೇಲಿಂದ ಇಳಿಸಿ ತಣ್ಣಗಾಗಲು ಬಿಡಿ
- ಅಗಲವಾದ ಪಾತ್ರೆಗೆ ಹಾಕಿ ಫ್ರಿಡ್ಜ್ ನಲ್ಲಿ ಅರ್ಧಗಂಟೆ ಇಟ್ಟು ಬೇಕಾದ ಆಕಾರಕ್ಕೆ ಕತ್ತರಿಸಿ ಕಡ್ಡಿ ಚುಚ್ಚಿಡಿ
- ಮತ್ತೆ ಒಂದು ಗಂಟೆ ಫ್ರಿಡ್ಜ್ ನಲ್ಲಿಟ್ಟು ತಿನ್ನಲು ಕೊಡಿ.

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಂದರ ಲ್ಲೊಂದು ಒಗಟು

೧. ಮೂರು ಅಕ್ಷರದ ಪದವು ಹಳೆಯ ನಾಣ್ಯ ನೆನೆಯುವುದು
೨.ಒಂದು ಎರಡು ಕೂಡಿ ನಳನ ಸತಿಯ ತಮ್ಮ ಎನುವುದು
೩. ಕೊನೆಯ ಎರಡು ತೊಳೆದ ಬಟ್ಟೆ ಶುಭ್ರ ಎನುವುದು
೪. ಒಂದು ಮೂರು ಕೂಡಿ ಸೀರೆ ನೆರಗು ಎಂದು ನುಡಿವುದು

ಉತ್ತರಕ್ಕೆ ಪುಟ ೧೧ ನೋಡಿ

ನಾನೆಂಬ ವೀಣೆ

ನುಡಿಸದಿರುವ ವೀಣೆ ನಾನು
ನುಡಿಸು ಒಮ್ಮೆ ನನ್ನನು
ನನ್ನ ನುಡಿಸಿ ಜಾಣ ನೀನು
ಪಡೆಯೊ ಕೊಂಚ ಹೊನ್ನನು

ನುಡಿವ ನನ್ನ ಮಿಡಿವ ಮುನ್ನ
ಎದೆಗೆ ಒತ್ತಿ ಚುಂಬಿಸು
ಜೀವಮಾನ ಗೆಳೆಯನೆಂದು
ನನ್ನನಿಂದು ನಂಬಿಸು

ಶ್ರುತಿಯ ಮಾಡು ಧೃತಿಯ ನೀಡು
ನನ್ನ ದೇಹ ತಂತಿಗೆ
ಕೃತಿಯ ನುಡಿಸಿ ಸುಕೃತನಾಗು
ಅಂತ್ಯ ವಾಡು ಚಿಂತೆಗೆ

ನಿನ್ನ ಎದೆಯೊಳಾನು ಐಕ್ಯ
ಇದನು ಯಾರು ನಂಬರು
ನಾನು ನೀನು ಬೇರೆ ಬೇರೆ
ಎಂಬ ಜನರು ಹುಂಬರು

ರಚನೆ: ಮಾಲು, ಅಡಿಲೇಡ್

ಹಾಸ್ಯ ಚಿಲುಮೆ

ಬಾಕ್ಸಿಂಗ್ ಪಟು ಮಹಮದ್ ಆಲಿ ಒಮ್ಮೆ ಅಮೇರಿಕಾದಲ್ಲಿ ವಿಮಾನ ಹತ್ತಿದ. ಗಗನ ಸಖಿ ಸೀಟ್ ಬೆಲ್ಟ್ ಹಾಕಲು ಹೇಳಿದಳು. ಅದಕ್ಕೆ ಆಲಿ"ಸೂಪರ್ ಮ್ಯಾನ್ ಗೆ ಸೀಟ್ ಬೆಲ್ಟ್ ಅಗತ್ಯವಿಲ್ಲ"ಎಂದ. ತಕ್ಷಣ ಆಕೆ" ಸೂಪರ್ ಮ್ಯಾನ್ ಗೆ ವಿಮಾನದ ಅಗತ್ಯವೇಕೊ?" ಎಂದು ಹಾಸ್ಯ ಮಾಡಿ ಗೆದ್ದಳು

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಜಾಣ ಕರ್ನಾಟಕ

೧. ಒಲವಿನ ಕವಿಯೆಂದು ಹೆಸರುವಾಸಿಯಾದ ಕೆ. ಎಸ್ ನರಸಿಂಹಸ್ವಾಮಿಯವರ ಹುಟ್ಟೂರು ಯಾವುದು, ಯಾವ ಜಿಲ್ಲೆಯಲ್ಲಿದೆ.?

೨. ನಡೆದಾಡುವ ದೇವರೆಂದೇ ಪ್ರಖ್ಯಾತರಾದ ಶತಾಯುಷಿ, ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳ ಹುಟ್ಟೂರು ಯಾವುದು ಮತ್ತು ಅದು ಇಂದಿನ ಯಾವ ತಾಲೂಕು ಮತ್ತು ಜಿಲ್ಲೆಯಲ್ಲಿದೆ?

ಸರಿ ಉತ್ತರಕ್ಕೆ ಪುಟ ೧೫ ನೋಡಿ

ಒಂದರಲ್ಲೊಂದು ಒಗಟು – ಉತ್ತರ

೧. ದಮಡಿ ೨.ದಮ ೩.ಮಡಿ ೪.ದಡಿ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ಐದು ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಮಾನ್ಯನು ಎಲ್ಲರೊಡನೆ ಬೆರೆತು, ತಾನೂ ಎಲ್ಲರಂತೇ ಆದಾಗ ಅವನು ಕೂಡ ಆಗುವನು.

೨. ನಾಲ್ಕು ಜನರು ಆಡುವುದಕ್ಕೆ ನಾಟಕದ ವೇದಿಕೆಯೇನೂ ಬೇಕಿಲ್ಲ.



೩. ವರ ಕೊಟ್ಟಂತೆ ಋಣ ತೀರಿಸಲು ಬಂದ ಮಳೆರಾಯ.



೪. ಊರಿನ ಒಳ್ಳೆಯದಕ್ಕಾಗಿ ಕಾರ್ಯ ನಡೆಸುವವನೇನು ಈತ?

೫. ಸಂಗಾತಿ ಬಯಸುವುದು ಇದನ್ನೇ!

೬. ಯೋಗದ ಒಂದು ಅವಿಭಾಜ್ಯ ಅಂಗ ಹಾಸನಕ್ಕೆ ಬಲು ಹತ್ತಿರ.

ಉತ್ತರ: ಸರಳವಾದ ಮಾತುಗಳೇ ಕನ್ನಡದಲ್ಲಿ ಜನಪ್ರಿಯ ಆರಾಧನಾ ವಿಧಾನವಾಯಿತು.



ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಫೆಬ್ರವರಿ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಜನವರಿ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಸರಿಯಾಗಿ ಉತ್ತರಿಸಿದವರು

- ಸುಮ ಅಶೋಕ್, ಸಿಡ್ನಿ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಬಿ.ಆರ್. ವತ್ಸಲಾ ದ್ವಾರಕನಾಥ್, ಕೆ.ಜಿ.ಎಫ್
- ಪುಷ್ಪವಲ್ಲಿ ಚಂದ್ರಶೇಖರ್, ಕೆಂಗೇರಿ
- ಚಂದ್ರಿಕ ಉದಯ್, ಸಿಡ್ನಿ
- ಹರಿಣಿ ರಾವ್, ನವದೆಹಲಿ
- ಅಪರ್ಣ, ಸಿಡ್ನಿ

ಜನವರಿ ತಿಂಗಳ ಪದಪುಂಜದ ಉತ್ತರ

೧. ಮಾತುಕತೆಗಳಾದ ನಂತರ, ಇನ್ನು ಈ ಮದುವೆ ಖಂಡಿತವೆಂದು ಅಚರಿಸುವ ಸಮಾರಂಭ.

ನಿ	ಶ್ಚಿ	ತಾ	ರ್ಥ

೨. ವಿಶಿಷ್ಟವಾದ ಮಡಕೆಯನ್ನು ಬೋರಲು ಹಾಕಿ ಬಾರಿಸಿದರೆ, ಅದಕ್ಕೆ ಬೇರೊಂದು ಹೆಸರೇ ಬಂತು.

ಘ	ಟಂ

೩. ಈ ಅತಿ ಪುಟ್ಟ ನಗರದಲ್ಲಿರುವವರೆಲ್ಲರೂ ಅಗ್ನಿಗೆ ಆಹುತಿಯಾಗುವವರೇ!

ಬೆಂ	ಕಿ	ಪ	ಟ್ಟ	ಣ

೪. ದೊಡ್ಡವಳಿಗೊಂದು, ಕಿರಿಯವಳಿಗೊಂದು ಎಂದು ಕೊಟ್ಟರೂ, ಕಿರಿಯಪುತ್ರಿಯ ಊರೇ ದೊಡ್ಡದಾಯಿತಲ್ಲ?

ಚೆ	ಕ್ಕ	ಮ	ಗ	ಳೂ	ರು.

೫. ನಡುವು ಬಳ್ಳಿಯಂತಾಡುವ ಪರಿ.

ಬ	ಳು	ಕು

ಮಾಡಬೇಕಾದ ಪದ:

ನಮ್ಮ ರಾಜ್ಯದ ಹವಾಮಾನದಲ್ಲಿ ಪ್ರಮುಖ ಪಾತ್ರವಹಿಸುವ ಈ ಭೌಗೋಳಿಕ ರಚನೆ.

ಹಸಿರಿನ ಸಿರಿ, ಸೌಂದರ್ಯದ ಖನಿ.

ಪ	ಶ್ಚಿ	ಮ		ಘ	ಟ್ಟ	ಗ	ಳು

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

NRI SEVA
Educational, Legal, financial, Health, Reality management services Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852



ರಚನೆ: ದಿವ್ಯಶ್ರೀ ಡಿ, ಕೆ.ಜಿ.ಎಫ್ - ಚುಕ್ಕಿಗಳು - ೧೫-೮

ಶಕ್ಕೂ - ಶಾಪಿಂಗ್ !!!

ಸ್ಮಿತಾ ಮೇಲ್ಕೋಟೆ

ನಮ್ಮ ಶಕ್ಕೂ ಯಾವಾಗಲೂ ವಿಂಡೋ ಶಾಪಿಂಗ್ ನೇ ಮಾಡೋದಪ್ಪ. ವಿಧ ವಿಧವಾದ ವಯ್ಯಾರವಾದ ಮಾಲ್ ಗಳ ಒಳಗೆ ಹೋಗೋದು, ಬಟ್ಟೆ ಬರೆ ಸಾಮಾನು, ಫ್ರಿಡ್ಜು- ಗಿಜ್ಜು ಎಲ್ಲಾ ನೋಡೋದು ಬರೋದು ಬಿಟ್ಟು, ಕಿಟಕಿಇಂದ ನೋಡಿ ಬರೋದಕ್ಕೆ ವಿಂಡೋ ಶಾಪಿಂಗ್ ಅಂತಾರಲ್ವ. ಆದರೆ ಶಕ್ಕೂ ಕಿಟಕಿ ಪಕ್ಕದ ಬಾಗಿಲ ಒಳಗೆ ರಾಜ ರೋಷವಾಗಿ ತೋರಿ ಸೇಲ್ ಸೇಲ್ ಅಂತ ಇಟ್ಟಿದ್ದ ಸಾಮಾನೆಲ್ಲವನ್ನೂ ಗಾಡಿ ಒಳಗೆ ತೂರಿಸಿಕೊಂಡು ಕಷ್ಟ ಪಟ್ಟು ಮನೆಗೆ ಬರ್ತಾಳಲ್ಲ. ನನಗೆ ಇನ್ನಿಲ್ಲದ ಕೋಪ ಉಕ್ಕಿ ಉಕ್ಕಿ ಬರುತ್ತೆ ನೋಡಿ. ಮನೇಲಿ ಜಾಗ ಇಲ್ಲ ಮಾರಾಯ್ತಿ, ತಂದು ತಂದು ತುಂಬಬೇಡವೆ ಅಂತ ಎಷ್ಟು ಹೇಳಿದ್ರೂ ಕಿವಿ ಒಳಗೆ ಹಾಕಿ ಕೊಳ್ಳೋದೇ ಇಲ್ಲ.

ನಮ್ಮ ಶಕ್ಕೂ ಕೂಡ ಬೆಂಗಳೂರಿನ ಸಿಲಿಕನ್ ಸಿಟಿ ಒಳಗೆ ಒಂದು IT ಕಂಪನಿನಲ್ಲಿ ಕೆಲಸ. ಇರಕ್ಕೆ ಗಂಡ ಮಾಡಿದ ಮನೆ. ಚಿಕ್ಕ ಮಕ್ಕಳು. ಅವರನ್ನ ನೋಡಿಕೊಳ್ಳಕ್ಕೆ ಒಬ್ಬ ಆಯ, ಅಡಿಗೆ ಮಾಡಕ್ಕೆ ಕುಕ್, ಮನೆ ಕೆಲಸ ಮಾಡಕ್ಕೆ ಒಬ್ಬ ಆಳು. ೫ ದಿನ ಆಫೀಸ್ಗೆ ಹೋಗಿ ಬಂದಲೂ ಅಂದ್ರೆ ಸಾಕು, ಉಸ್ಸಪ್ಪಾ ಅಂತ ಕೂತು ಬಿಡ್ತಾಳೆ. ಅದೆಂತದೋ ಸ್ಟ್ರೆಸ್ ಅಂತೆ. ಆದ್ರೆ ಶನಿವಾರ - ಭಾನುವಾರ ಬಂದ್ರೆ ನೋಡಿ, ಸ್ಟ್ರೆಸ್ ಮಣ್ಣು ಮಸಿನ ಮರೆತು ಶಾಪಿಂಗ್ ಹೊರಟು ನಿಂತು ಬಿಡ್ತಾಳೆ. ನಿನಗೆ ಸಿಗೋದು ರಜ ಎರಡೇ ದಿನ ಕಣೆ, ಹಾಯಾಗಿ ಮಕ್ಕಳು ಗಂಡ ಅಂತ ಮನೇಲಿ ಇರಬಾರದ ಅಂದ್ರೆ, ಇಲ್ಲಾರೀ ನಂಗೆ ಆಗಿರೋ ಸ್ಟ್ರೆಸ್ ಹೋಗ್ಬೇಕೂಂದ್ರೆ, ನಾನು ಈ ರೀತಿ ಶಾಪಿಂಗ್ ಯಾವಾಗಲೂ ಮಾಡಬೇಕು ಅಂತಾಳೆ. ಶಾಪಿಂಗ್- ತೆರಪಿ ಅಂತ ಕರೀಬಹುದು ಅಲ್ವೆ. ಏನೋ ಒಂದು ಹೇಳಿ ನನ್ನ ಬಾಯಿ ಮುಚ್ಚಿಸೋ ಕಲೆ ಚೆನ್ನಾಗಿ ಕರಗತ ಮಾಡಿಕೊಂಡಿದ್ದಾಳೆ ನನ್ನ ಪತ್ನಿ.

ಹೀಗೆ ನಮ್ಮ ಜೀವನ ಮನೆ ಭರ್ತಿ ಸಾಮಾನು ತುಂಬಿ ತುಳುಕಾಡಿಕೊಂಡು ಸಂತೋಷದಿಂದ ಸಾಗುತ್ತಿರುವಾಗ, ನಮ್ಮ ಶಕ್ಕೂ ಡಿಯರ್, ಅದೇ ಶಾಪ್ಪಿಂಗ್- ಶಕ್ಕೂ ಶನಿವಾರ -ಭಾನುವಾರ ಬಂದರೂ ಮನೇಲೆ ಇದ್ದಾಳೆ. ನನಗೆ ಇಷ್ಟವಾದ ತಿಂಡಿ ಮಾಡಿ, ಕುಕ್ ಗೆ ರಜ ಕೊಟ್ಟು ಬಿಟ್ಟಿದ್ದಾಳೆ. ಮಕ್ಕಳ ವಿಧ್ಯಾಭ್ಯಾಸ ಎತ್ತ ಸಾಗಿದೆ ಎಂಬ ಮಾತು ಕತೆ ಬೇರೆ. ಅಬ್ಬ! ನಮ್ಮ ದೇವರು ಕಡೆಗೂ ಕಣ್ಣು ಬಿಟ್ಟ. ಶಾಪಿಂಗ್ ಹುಚ್ಚು ಬಿಡ್ತು ಸಧ್ಯ !! ದೇವಸ್ಥಾನಕ್ಕೆ ನಮ್ಮ ಸಕುಟುಂಬ ಸಮೇತ ಹೋಗಿ ದೇವರಿಗೆ ಥ್ಯಾಂಕ್ಸ್ ಹೇಳಿ ಬಂದು ಬಿಡಬೇಕು.

ನಮ್ಮ ಚಿಕ್ಕ ಮೂರು ಕೋಣೆಯ ಮನೆಯಲ್ಲಿ ಶಕ್ಕು ತುಂಬಿಟ್ಟ ಸಾಮಾನು ನೋಡಿ ಒಂದು ಕ್ಷಣ ಬೆಂಗಳೂರಿನ ಚಳಿಯಲ್ಲೂ ಬೆವರಿದೆ. ನಮ್ಮನೆ ಯಾರಾರು ರೈಡ್ ಮಾಡಿದ್ರೆ, ಎಲ್ಲಾ ದಿನ ಪತ್ರಿಕೆಯಲ್ಲೂ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಬಂದು ಬಿಡುತ್ತೆ. " ಶಾಪಿಂಗ್ ಶಕ್ಕು ಕೂಡಿಟ್ಟ ಸಾಮಾನು ಸೆಲೆಬ್ರಿಟಿಗಳ ಮನೆಯಲ್ಲೂ ಕೂಡ ಸಿಗೋಲ್ಲ " ಇದಕ್ಕೆಲ್ಲ ಒಂದು ಪರಿಹಾರ ಕಂಡು ಹಿಡಿಯಲೇ ಬೇಕು ಅಂತ, ನಾನು ಕೂಡ ಚಿಂತಾ ಮಗ್ನನಾದೆ. ನನ್ನ ಚಿಂತೆಗೆ ಪರಿಹಾರ ಸಿಗುವವರೆಗೂ ಶಕ್ಕೂ ಆಗೊಂದು ಈಗೊಂದು ಟೀ - ಕಾಫಿ ಸರಬರಾಜು ಮಾಡಿದಳು.

ಮಕ್ಕಳಿಗೆ ಸ್ಕೂಲಿಗೆ ರಜೆ ಬಂತು. ಶಕ್ಕೂ ತನ್ನ ಅಮ್ಮನ ಮನೆಗೆ ಸ್ವಲ್ಪ ದಿನ ಇದ್ದು ಬರ್ತೀನಿ ಅಂತ ಹೊರಟು ನಿಂತಳು. ನನಗೂ ಪಾಪ ಶಕ್ಕೂ ಶಾಪಿಂಗ್ ಕೂಡ ನಿಂತು ಹೋಗಿದೆ. ಕೆಲಸ ಮಾಡಿ ಮಾಡಿ ಸುಸ್ತಾಗಿರ್ತಾಳೆ. ಮಕ್ಕಳ ಜೊತೆ ನಿರಾಳವಾಗಿ ಅಮ್ಮನ ಮನೆಯಲ್ಲಿ ಇದ್ದು ಬರಲಿ ಎಂದು ಸಂತೋಷದಿಂದ ಕಳಿಸಿಕೊಟ್ಟೆ. ಬೆಳಿಗ್ಗೆ ಎದ್ದ ತಕ್ಷಣ ನನ್ನ ಮನಸ್ಸು ಜಾಗೃತವಾಯಿತು. ಏಳು ಇನ್ನು ಸಮಯ ಹಾಳು ಮಾಡಬೇಡ. ಕೂಡಿಟ್ಟ ಸಾಮಾನುಗಳಿಗೆ ಒಂದು ಗತಿ ಕಾಣಿಸು. ಮನೆಯಲ್ಲ ಸ್ವಚ್ಛ ಮಾಡು ಎಂದು ಕೊಗಿ ಕೊಗಿ ಹೇಳಿತು. ರೂಮು, ಅಡಿಗೆ ಮನೆ, ಅಟ್ಟ ಎಲ್ಲೋ ಬಿಡದೆ, ಇನ್ನೂ ಹೊಸದಾಗಿ ಪ್ಯಾಕಿಂಗ್ ಕೂಡ ಬಿಚ್ಚದ ಸಾಮಾನುಗಳನ್ನು ಒಂದು ಕಡೆ ಗುದ್ದೆ ಹಾಕಿ, ಸ್ವಲ್ಪ ಉಪಯೋಗಿಸಿದ ಮತ್ತು ಅವಶ್ಯಕತೆ ಇಲ್ಲದ ಸಾಮಾನು ಗಳನ್ನೂ ದಾನವಾಗಿ ಕೊಡಬೇಕೆಂದು ಒಂದು ಕಡೆ ಇಟ್ಟೆ. ಹೊಸ ಹೊಸ ಶರ್ಟ್ ಗಳು, ಪ್ಯಾಂಟ್ ಗಳು, ಟೈಗಳು ನನ್ನ ಕೈ ಸೇರಿತು. ಹೇಗೂ ebay, OLX ಅಂತ ಆನ್ಲೈನ್ ಮಾರಾಟ ಮಳಿಗೆಗಳ ಸಹಾಯ ತಗೊಂಡು ಮಾರಿ ಸ್ವಲ್ಪ ದುಡ್ಡು ಕೂಡ ಮಾಡಿಬಿಟ್ಟೆ. ಆದರೆ ನನ್ನ ಹೆಂಡತಿ ಮರಳಿ ಬಂದಾಗ ಏನು ಹೇಳುವುದು ಅಂತ ಕೂಡ ಮನಸ್ಸಲ್ಲೇ ಪ್ಲಾನ್ ಮಾಡಿ ಆರಾಮವಾಗಿದ್ದೆ.

ತಿಂಗಳ ಬಳಿಕ ಶಕ್ಕೂ ಬಂದಳು, ಮನೆಯೆಲ್ಲಾ ಯಾಕೋ ಖಾಲಿ ಕಾಣಿಸಿತು ಅವಳಿಗೆ. ಏನ್ರೀ ಆಯಿತು ಮನೇಲಿ ಇದ್ದ ಸಾಮಾನು ಅಂತ ದಬಾಯಿಸಿದಳು. ನಾನು ಮುಂಚೆಯೇ ಪೂರ್ವ ಸಿದ್ದತೆ ಮಾಡಿದ್ದ ಉತ್ತರ " ಒಂದು ದಿನ ಮನೆ ಒಳಗೆ ಬರ್ತೀನಿ, ಸಾಮಾನೆಲ್ಲ ಚೆಲ್ಲಾಪಿಲ್ಲಿ, ಎಷ್ಟೊಂದು ಸಾಮಾನು ಕಳವು ಆಗಿತ್ತು. ಅಡಿಗೆ ಮನೆ ಕಿಟಕಿ ಬೇರೆ ಸ್ವಲ್ಪ ಓಪನ್ ಆಗಿತ್ತು " ಅಂತ ನಿಧಾನವಾಗಿ ಸುಳ್ಳಲ್ಲ ಇದು ನಿಜ ಎನ್ನುವ ಹಾಗೆ ಹೇಳಿ ಮುಗಿಸಿದೆ. ಶಕ್ಕೂ ಪಾಪ ಬಹಳ ನೊಂದುಕೊಂಡಳು, ಅಷ್ಟೊಂದು ಇಷ್ಟ ಪಟ್ಟು ತಂದ ಸಾಮಾನುಗಳಿಗೆ ಈ ರೀತಿಯ ಅಂತ್ಯವಾಯಿತಲ್ಲ ಅಂತ. ದುಃಖದಿಂದ ಮಾತೆ ಹೊರಡಲಿಲ್ಲ. ಫೆಬ್ರವರಿ ೧೪ ಬಂತು ನೋಡಿ, ಮತ್ತೆ ಶಾಪಿಂಗ್ ಮಳಿಗೆಗಳಲ್ಲಿ ಕೆಂಪು ಬಿಳೀ ಬಲೂನ್ ಕಟ್ಟಿ ಸೇಲ್ ಸೇಲ್ ಅಂತ ಬೋರ್ಡ್ ಬರೆದು ನಮ್ಮನ್ನು ಬಫ್ಲೂನ್ ಮಾಡೋ ದಿನ. ಪ್ರತಿ ವರ್ಷ ನಮ್ಮ ಶಕ್ಕೂ ಮೇಡಂ ನವರು ವಾರಗಟ್ಟಲೆ ಮಾಲ್ಗಳಲ್ಲಿ ಸುತ್ತಿ ನನಗೆ ಗಿಫ್ಟ್ ತರುತ್ತಿದ್ದಳು.. ಆದರೆ ಈಸಾರಿ ಹಾಗೇನು ಆಗಲಿಲ್ಲ. ಸಧ್ಯ ಇನ್ನೂ ಶಕ್ಕೂ ಹಾಗೆ ಇದ್ದಾಳೆ. ಶಾಪಿಂಗ್ ಭೂತ ಮತ್ತೆ ಮೆಟ್ಟಿಲ್ಲ ಅಂತ ಸಮಾಧಾನ.

ದೊಡ್ಡ ಪ್ಯಾಕಿಂಗ್ ಗಿಫ್ಟ್ ಹಿಡಿದು ಶಕ್ಕೂ " Happy Valentines Day " ಅಂತ ಕೊಟ್ಟಳು. ಬಿಚ್ಚಿ ನೋಡ್ತೀನಿ, ನಾನೇ ಮಾರಿದ ಶರ್ಟ್ ಪಾಂಟ್ ಟೈಗಳು ಮತ್ತೆ ನಿಯತ್ತಿನ ನಾಯಿ ಮರಿ ತರ ನನ್ನ ಬಳಿಗೆ ಮತ್ತೆ ಬಂದಿವೆ. ಶಕ್ಕೂ ಏನೇ ಇದು ನೀನು ಯಾವಾಗಲೇ ಇಷ್ಟೊಂದು ಶಾಪಿಂಗ್ ಮಾಡಿದೆ.

ರೀ ನಾನು ಊರಿಗೆ ಹೋಗೋ ಮುಂಚೆಯಿಂದಾನೆ ನಮ್ಮನೆಗೆ ತಂದ್ವಲ್ಲ ಹೊಸ ವಿಂಡೋಸ್ ೮ ಕಂಪ್ಯೂಟರ್, ಅದರಲ್ಲಿ ಆಗಾಗ ಆನ್ಲೈನ್ ಶಾಪಿಂಗ್ ಮಾಡ್ತಾ ಇದ್ದೆ. ಊರಿಗೆ ಹೋದಾಗ, ಆನ್ಲೈನ್ ಸ್ವಲ್ಪ ಜಾಸ್ತಿನೆ ನೋಡ್ತಾ ಇದ್ದೆ ಆಗ, ಕೆಲವು ಸೈಟ್ಗಳಲ್ಲಿ ಜನ ತಮಗೆ ಬೇಡದ ಕೆಲವು ವಸ್ತುಗಳನ್ನು ಕಡಿಮೆ ಬೆಲೆಗೆ ಮಾರಿ ಬಿಡ್ತಾರೆ. ಹಾಗಂತ ಅದನ್ನು ಉಪಯೋಗಿಸಿರ್ತಾರೆ ಅಂತ ಹೇಳಕ್ಕೆ ಆಗಲ್ಲ..... ಅಂತ ಇನ್ನೂ ಏನೇನೋ ಹೇಳ್ತಾ ಇದ್ದಾಗ ನನಗೆ ತಲೆ ತಿರುಗಿ ಪ್ರಜ್ಞೆ ತಪ್ಪಿತು...

window ಶಾಪಿಂಗ್ ಈಗ windows ಶಾಪಿಂಗ್ ಆಗಿ ತಿರುಗಿ ಬಂದಿತ್ತು !! " ಹೋದ್ಯಾ ಪಿಚಾಚಿ ಅಂದ್ರೆ ಬಂದ್ಯಾ ಗವಾಕ್ಷಿಲಿ" ನಾಣ್ನುಡಿ ಸುಳ್ಳು ಮಾಡಕ್ಕೆ ಆಗುತ್ತದಯೇ ದೇವರೇ ???!!! ▪

ಕರ್ನಾಟಕವನ್ನಾಳಿದ ರಾಜವಂಶಗಳು – ಭಾಗ ೪

ಲೇಖಕರು:
ನಾಗಶೈಲ ಕುಮಾರ್

ಹೊಯ್ಸಳರು, (ಕ್ರಿ.ಶ.950 ರಿಂದ 1343): ಹೊಯ್ಸಳರೆಂದರೆ ನೆನಪಾಗುವುದು ಅವರ ಕಲಾ ಸಮ್ರಾಜ್ಯ. ಇವರು ಕರ್ನಾಟಕದ ಹೆಸರನ್ನು ಕಲೆಯ ಜಗತ್ತಿನಲ್ಲಿ, ಅದರಲ್ಲೂ ಶಿಲ್ಪಕಲೆಯಲ್ಲಿ ಕೀರ್ತಿಯ ಉತ್ತುಂಗಕ್ಕೆ ಕೊಂಡೊಯ್ದಿದ್ದಾರೆ. ದಕ್ಷಿಣದ ಗಂಗರ ಮಾಂಡಲೀಕರಾಗಿದ್ದ ಹೊಯ್ಸಳರು, ಗಂಗರ ಪತನಾನಂತರ ಸ್ವತಂತ್ರ ರಾಜರಾಗಿ, ಇಂದಿನ ಕರ್ನಾಟಕದ ಬಹುಭಾಗವನ್ನು ಆಳಿದ್ದರು. ಪ್ರಚಲಿತವಿರುವ ಜನಪ್ರಿಯ ಕಥೆ " ಸುದತ್ತಾಚಾರ್ಯ ರೆಂಬ ಗುರುವಿನ ಆಣತಿಯಂತೆ ಹುಲಿಯನ್ನು ಕೊಂದ ಸಳನಿಂದ 'ಹೊಯ್ಸಳ' ಸಾಮ್ರಾಜ್ಯ ಸ್ಥಾಪಿತವಾಯಿತು ಎಂಬುದು ವಿವಾದಗ್ರಸ್ತ. ಗಂಗರ ಮಾಂಡಲೀಕರಾಗಿದ್ದ ಹೊಯ್ಸಳ ಕುಲದವರು ಮೂಲತಃ ಮಲೆನಾಡಿನ ಸೊಸೆವೂರು ಅಥವಾ ಅಂಗಡಿ ಎಂಬ ಸ್ಥಳದವರು.

ಕ್ರಿ.ಶ.950 ರಲ್ಲಿ ಹೊಯ್ಸಳ ಅರೆಕಲ್ಲ ಎಂಬಾತನಿಂದ ಹೊಯ್ಸಳರ ಇತಿಹಾಸ ಆರಂಭವಾಗುತ್ತದೆ. ನೃಪಕಾಮನೆಂಬುವವನು ಹೊಯ್ಸಳರಲ್ಲಿ ಮೊದಲ ಗಣ್ಯ ದೊರೆ. ನೃಪಕಾಮನ ಮಗ ವಿನಯಾದಿತ್ಯ ಹಾಗೂ ಅವನ ಮಗ ಎರೆಯಂಗ ಪ್ರಮುಖ ಅರಸುಗಳಾಗಿ ಹೊಯ್ಸಳ ಸಾಮ್ರಾಜ್ಯಕ್ಕೆ ಭದ್ರ ತಳಹದಿ ಹಾಕಿದರು.



ವಿಷ್ಣುವರ್ಧನ: ಎರೆಯಂಗನ ಸೋದರ ಬಿಟ್ಟಿದೇವ ಹೊಯ್ಸಳ ವಂಶದ ಅತಿ ಗಣ್ಯ ಅರಸು. ಹೊಯ್ಸಳರನ್ನು ಚಾಳುಕ್ಯರಿಂದ ಸ್ವತಂತ್ರರಾಗಿ ಮಾಡಲು ಇವನು ಸಾಕಷ್ಟು ಶ್ರಮವಹಿಸಿದ. ಅದಕ್ಕಾಗಿ ಅನೇಕ ದಂಡಯಾತ್ರೆಗಳನ್ನು ನಡೆಸಬೇಕಾಯಿತು. ಚೋಳ, ಕೊಂಗಾಳ, ಚೆಂಗಾಳ್ವ, ಚಾಳುಕ್ಯ, ಹೀಗೆ ಅನೇಕ ಅರಸುಗಳ ಮೇಲೆ ಸತತವಾಗಿ ಯುದ್ಧ ನಡೆಸಿ ಜಯಶಾಲಿಯಾದರೂ, ಕಡೆಯಲ್ಲಿ ಸಿಂಧವಂಶದ ಪೆರ್ಮನೆಂಬಾತನ ಕೈಲಿ ಸೋತು ಮತ್ತೆ ಚಾಳುಕ್ಯರ ಸಾಮಂತನೇ ಆಗಬೇಕಾಯಿತು. ತನ್ನ ವಿಜಯಗಳ ಸಲುವಾಗಿ ತಲಕಾಡಿನಲ್ಲಿ ಕೀರ್ತಿನಾರಾಯಣ ಮತ್ತು ಬೇಲೂರಿನಲ್ಲಿ ವಿಜಯನಾರಾಯಣ ದೇಗುಲಗಳನ್ನು ಕಟ್ಟಿಸಿದ. ತಾನು ಚಕ್ರವರ್ತಿ ಎನಿಸಿಕೊಳ್ಳಲು ಯಜ್ಞ ಯಾಗಾದಿಗಳನ್ನು ಜೈನ ಸಂಪ್ರದಾಯದಲ್ಲಿ ಸಾಧ್ಯವಿಲ್ಲವೆಂದು, ಮತ್ತು ಶ್ರೀ ರಾಮಾನುಜರಿಂದ ಪ್ರಭಾವಿತನಾಗಿ ವೈಷ್ಣವ ಧರ್ಮವನ್ನು ಸ್ವೀಕರಿಸಿದ ಮತ್ತು ವಿಷ್ಣುವರ್ಧನನೆಂಬ ಹೆಸರು ಸ್ವೀಕಾರ ಮಾಡಿದ. ಬಿಟ್ಟಿದೇವನು ಕವಿಯು, ರಾಜನೀತಿ ಚತುರ, ಸಂಗೀತ ಪರಿಣಿತನೂ ಆಗಿದ್ದ. ಇವನ ಪಟ್ಟದರಾಣಿ ಶಾಂತಲೆ ನಾಟ್ಯ ಸರಸ್ವತಿಯೆಂದೇ ಪ್ರಸಿದ್ಧಳಾಗಿದ್ದಾಳೆ.

ವೀರಬಲ್ಲಾಳ (ಬಲ್ಲಾಳII): ವಿಷ್ಣುವರ್ಧನನ ಮಗ ಸಮರ್ಥನಾದ ರಾಜನಾಗದೆ, ಅವನ ಮಗ ಬಲ್ಲಾಳII ತಂದೆಯ ವಿರುದ್ಧ ಬಂಡೆದ್ದು ತಾನೇ ೧೧೭೩ ರಲ್ಲಿ ರಾಜ್ಯಭಾರ ವಹಿಸಿಕೊಂಡ. ತನ್ನ ತಂದೆಯ ಕಾಲದಲ್ಲಿ ಕುಗ್ಗುತ್ತಾ ಹೋಗಿದ್ದ ಹೊಯ್ಸಳ ರಾಜ್ಯವನ್ನು ಸಕಲ ದಿಕ್ಕುಗಳಲ್ಲಿಯೂ ವಿಸ್ತರಿಸಿದ ಕೀರ್ತಿ ಬಲ್ಲಾಳII ನಿಗೆ ಸೇರುತ್ತದೆ. ಇವನು ಹೊಯ್ಸಳ ವಂಶದಲ್ಲಿಯೇ ಅದ್ವಿತೀಯ ರಾಜನಾಗಿದ್ದು ದಕ್ಷಿಣದಲ್ಲಿ ಕಂಚಿಯಿಂದ ಉತ್ತರದ ಕೃಷ್ಣೆಯವರೆವಿಗೂ ವಿಜಯಯಾತ್ರೆಯನ್ನು ನಡೆಸಿದ. ಇವನು ಯುದ್ಧಗಳಲ್ಲಿ ನಿರತನಾಗಿರಲು, ಇವನ ರಾಣಿ ಉಮಾದೇವಿ ರಾಜಧಾನಿಯಲ್ಲಿ ರಾಜ್ಯದ ವ್ಯವಹಾರಗಳನ್ನು ನೋಡಿಕೊಳ್ಳುವಷ್ಟು ಸಮರ್ಥಳಾಗಿದ್ದಳು, ಅಷ್ಟೇಅಲ್ಲದೆ ಯುದ್ಧಗಳನ್ನು ನಡೆಸಿ ಜಯಶಾಲಿಯೂ ಆಗಿದ್ದಳು. ವೀರಬಲ್ಲಾಳನು ತಮಿಳುನಾಡಿನ ರಾಜಕೀಯದಲ್ಲೂ ಭಾಗವಹಿಸಿ ಚೋಳರಿಗೆ ನೆರವಾಗಿ ಚೋಳಪ್ರತಿಷ್ಠಾಪನಾಚಾರ್ಯ ಎಂಬ ಬಿರುದಿಗೆ ಪಾತ್ರನಾದನು. ರಾಜ್ಯ ವಿಸ್ತರಣೆ ಮಾತ್ರವಲ್ಲದೆ ಕಲೆ ಹಾಗೂ ಸಾಂಸ್ಕೃತಿಕವಾಗಿಯೂ ವೀರಬಲ್ಲಾಳನ ಕಾಲ ಉತ್ತುಂಗದಲ್ಲಿತ್ತು. ನಂತರದ ರಾಜರುಗಳು ತಮಿಳುನಾಡಿನಲ್ಲಿ ರಾಜಧಾನಿಯನ್ನು ಮಾಡಿಕೊಂಡು ಅಲ್ಲಿನ ರಾಜಕೀಯದಲ್ಲಿಯೇ ಕೆಲವು ಕಾಲ ಮಗ್ನರಾಗಿದ್ದರು.

೧೨೯೧ ರಲ್ಲಿ ಪಟ್ಟವೇರಿದ ಬಲ್ಲಾಳ III ಮತ್ತೊಬ್ಬ ಸಮರ್ಥ ಅರಸು. ಪ್ರಥಮ ಭಾರಿಗೆ ದಕ್ಷಿಣಭಾರತದಲ್ಲಿ ಪರಕೀಯರನ್ನು ಎದುರಿಸಿದವನೆಂಬ ಹೆಗ್ಗಳಿಕೆಯಷ್ಟೇ ಅಲ್ಲದೆ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಬೆಳಕು ಬೀರಿದವನೂ ಇವನೇ ಎಂಬ ಕೀರ್ತಿಗೆ ಪಾತ್ರನಾಗಿದ್ದಾನೆ. ಸೇಉಣರು, ಪಾಂಡ್ಯರೊಡನೆ ಯುದ್ಧಗಳಲ್ಲಿ ನಿರತನಾಗಿರುವಾಗ ದೆಹಲಿಯಿಂದ ಮಲ್ಲಿಕ್ ಕಾಫ಼ರನ ಸೇನೆ ದ್ವಾರಸಮುದ್ರವನ್ನು ಮುತ್ತಿತು. ಆಗ ರಾಜಧಾನಿಗೆ ಹಿಂದಿರುಗಿ ಬಂದು ರಕ್ಷಿಸಿಕೊಳ್ಳಲು ಪ್ರಯತ್ನಿಸಿ ಕಡೆಗೆ ಸುಲ್ತಾನನಿಗೆ ಶರಣಾಗಿ ಒಪ್ಪಂದ ಮಾಡಿಕೊಂಡು ಅಪಾರ ಧನವನ್ನೂ, ಆನೆಗಳನ್ನು ಸುಲ್ತಾನನಿಗೆ ಕೊಟ್ಟ. ಅವರೊಡನೆ ತಮಿಳ್ನಾಡಿನ ಮೇಲಿನ ಯುದ್ಧಗಳಲ್ಲಿ ನೆರವಾದ. ಆದರೆ ನಂತರದ ದಿನಗಳಲ್ಲಿ ದೆಹಲಿಯ ಸುಲ್ತಾನನ ವಿರುದ್ಧ ತಿರುಗಿದನು. ಆಗ ಸುಲ್ತಾನನ ಸತತ ಹಾವಳಿಯಿಂದ ದಕ್ಷಿಣ ಭಾರತದ ರಾಜಮನೆತನಗಳೆಲ್ಲ ಕಣ್ಮರೆಯಾಗಿ ಕೇವಲ ಹೊಯ್ಸಳ ರಾಜ್ಯವೊಂದೇ ಉಳಿದಿತ್ತು.

ಮುಂದಿನ ಪುಟ ನೋಡಿ ...

ದಕ್ಷಿಣ ಭಾರತವನ್ನು ಸುಲ್ತಾನರ ದಂಡಯಾತ್ರೆಗಳಿಂದ ರಕ್ಷಿಸಲು ಹೊಸಪಟ್ಟಣ ಅಥವಾ ವಿರೂಪಾಕ್ಷಪುರವೆಂಬ ರಾಜಧಾನಿಯನ್ನು ಸ್ಥಾಪಿಸಿ ಅಲ್ಲಿ ಸೇನೆಯೊಂದನ್ನಿಟ್ಟ. ಮಧುರೆಯಲ್ಲಿ ಸ್ಥಾಪಿತವಾಗಿದ್ದ ಮುಸ್ಲಿಮ್ ಸಾಮ್ರಾಜ್ಯವನ್ನು ಕಿತ್ತೊಗೆಯಲು ಹೋರಾಡುತ್ತಾ ಬಲ್ಲಾಳನು ೧೩೪೨ರಲ್ಲಿ ಮರಣವನ್ನಪ್ಪಿದ. ಯಾರ ನೆರವೂ ಇಲ್ಲದೆ ಎಂಬತ್ತು ವರ್ಷಗಳಷ್ಟು ವಯಸ್ಸಾಗಿದ್ದ ವೀರ ಬಲ್ಲಾಳ III ಏಕಾಂಗಿಯಾಗಿ ಹೋರಾಡಿ ವಿಜಯದ ಹಾದಿಯಲ್ಲಿದ್ದರೂ ಮುಸ್ಲಿಮರ ಮೋಸದ ಮಾತುಗಳನ್ನು ನಂಬಿ ಅನ್ಯಾಯವಾಗಿ ಹೀನಾಯವಾದ ಮರಣವನ್ನು ಕಂಡನು. ಅದರೆ ಆ ವೇಳೆಗೆ ಕರ್ನಾಟಕದ ಸುವರ್ಣಯುಗವೆನಿಸಿಕೊಂಡ ವಿಜಯಗರ ಸಾಮ್ರಾಜ್ಯದ ಉದಯವಾಗುತ್ತಿದ್ದು ಬಲ್ಲಾಳನ ದೂರದೃಷ್ಟಿಯ ಫಲ ನೀಡಲಾರಂಭಿಸಿತ್ತು. ಸುಮಾರು ೨೦ ವರ್ಷಗಳ ಕಾಲ ಸತತವಾಗಷ್ಟೇ ಅಲ್ಲ ಏಕಾಂಗಿಯಾಗಿಯೂ ಕೂಡ ಹೋರಾಡಿದ ವೀರಬಲ್ಲಾಳIII ಕರ್ನಾಟಕ ಕಂಡ ಅದ್ವಿತೀಯ ಅರಸು.

ವೀರಬಲ್ಲಾಳನ ಮಗ ವೀರವಿರೂಪಾಕ್ಷನಿಗೆ ಮುಂದೆ ಪಟ್ಟವಾದರೂ, ಆತನು ಸಮರ್ಥನಾದ ಅರಸನಾಗದೆ ೧೩೪೬ರಲ್ಲಿ ತೀರಿಕೊಂಡು, ಹೊಯ್ಸಳ ಸಾಮ್ರಾಜ್ಯದ ಅಂತ್ಯವಾಯಿತು.



ಹೊಯ್ಸಳರ ಕಾಲದಲ್ಲಿ ವೈದೀಕ ಧರ್ಮವು ಜನಪ್ರಿಯವಾಗಿತ್ತು. ಜೈನ ಧರ್ಮದಲ್ಲಿ ಉನ್ನತಿ ಸಾಧಿಸ ಬಹುದೆಂದು ಅನೇಕ ಹಿಂದುಳಿದ ವರ್ಗಗಳವರು ಜೈನ ಧರ್ಮ ಸ್ವೀಕರಿಸಿದರು. ಹೊಯ್ಸಳರೇ ಸ್ವತಃ ಜೈನರಾಗಿ ಪರಿವರ್ತಿತರಾದ ಮಲೆಪರು. ಶ್ರೀ ರಾಮಾನುಜಾಚಾರ್ಯರ ಪ್ರಭಾವವು ಹೆಚ್ಚಾಗಿ ರೈತ ಸಮುದಾಯದವರೂ ಶ್ರೀವೈಷ್ಣವರಾದರು. ತಮಿಳುನಾಡಿನಿಂದ ಬಹು ಸಂಖ್ಯೆಯಲ್ಲಿ ಶ್ರೀವೈಷ್ಣವರು ಕರ್ನಾಟಕಕ್ಕೆ ವಲಸೆಯಾದರು. ದೇವಾಲಯಗಳ ನಿರ್ಮಾಣವೇ ಹಿರಿಯದಾದ ಉದ್ಯೋಗವಕಾಶವನ್ನು ಕಲ್ಪಿಸಿತ್ತು. ಅನೇಕ ಸಂಖ್ಯೆಯ ದೇವಾಲಯಗಳ ನಿರ್ಮಾಣವಾಗಿ, ಅವುಗಳಿದ್ದೆಡೆ ಅಗ್ರಹಾರಗಳೂ ರೂಪುಗೊಂಡವು. ಅನೇಕ ಕೆರೆ ತೊರೆಗಳ ನಿರ್ಮಾಣವಾಗಿ, ನೀರಾವರಿ ಪದ್ಧತಿಯು ವ್ಯವಸ್ಥಿತವಾಗಿತ್ತು. ಮಲೆನಾಡಿನ ಅರಣ್ಯ ಉತ್ಪನ್ನಗಳಾದ ಏಲಕ್ಕಿ ಕಾಳುಮೆಣಸು ಆಗಲೇ ರಪ್ತಾಗುತ್ತಿದ್ದವು. ಅಡಿಕೆ, ವೀಳ್ಯೆ, ತೆಂಗು ಸಮ್ರುದ್ಧವಾಗಿ ಬೆಳೆಯುತ್ತಿತ್ತು. ಕೈಗಾರಿಕೆ, ನೇಯ್ಗೆ, ವ್ಯಾಪಾರಗಳು ಜೋರಾಗಿ ನಡೆದು ಆರ್ಥಿಕವಾಗಿ ರಾಜ್ಯವು ಸುಸ್ಥಿಯಲ್ಲಿತ್ತು.

ಶಿಲ್ಪಕಲೆಯಲ್ಲಿ ಹೊಯ್ಸಳರು ಚಾಲುಕ್ಯರಿಂದ ಪ್ರಭಾವಿತರಾದರೂ, ತಮ್ಮದೇ ಸ್ವಂತ ಶೈಲಿಯನ್ನು ಅಳವಡಿಸಿಕೊಂಡು ನೂರಾರು ಅದ್ವಿತೀಯ ದೇವಾಲಯಗಳನ್ನು ರಾಜ್ಯದ ಉದ್ದಗಲಕ್ಕೂ ನಿರ್ಮಿಸಿದರು. ಇವರದು ಸಂಪೂರ್ಣ ದ್ರಾವಿಡ ಶೈಲಿ. ಬೇಲೂರು, ಹಳೇಬೀಡು, ತಲಕಾಡು, ಸೋಮನಾಥಪುರ, ಬಸರಾಳು, ಅರಸೀಕೆರೆ, ದೊಡ್ಡಗದ್ದವಳ್ಳಿ, ಮುಂತಾಗಿ ನೂರಾರು ಸ್ಥಳಗಳಲ್ಲಿ ಇಂದಿಗೂ ಹೊಯ್ಸಳರ ಸುಂದರ ರಚನೆಗಳು ಅಮರವಾಗಿವೆ.

ಕನ್ನಡ ಹಾಗೂ ಸಂಸ್ಕೃತ ಎರಡರಲ್ಲಿಯೂ ಅನೇಕ ಶ್ರೇಷ್ಠ ವಿದ್ವಾಂಸರೂ ಕವಿಗಳೂ ಮೆರೆದ ಕಾಲ ಹೊಯ್ಸಳರ ಕಾಲ. ಈ ಸಮಯದಲ್ಲಿ ಅನೇಕ ಮಹತ್ವದ ಕೃತಿಗಳ ರಚನೆಯಾಯಿತು. ಸಂಸ್ಕೃತದಲ್ಲಿ ಧಾರ್ಮಿಕ, ದ್ವೈತ, ವಿಶಿಷ್ಟಾದ್ವೈತದ ಅನೇಕ ಧಾರ್ಮಿಕ ಕೃತಿಗಳ ರಚನೆಯಾಯಿತು. ಕವಿಚಕ್ರವರ್ತಿ ಜನ್ನನ ಯಶೋಧರ ಚರಿತೆ, ಅನಂತನಾಥ ಪುರಾಣ ಮತ್ತು ಅನೇಕ ಶಾಸನಗಳನ್ನೂ ರಚಿಸಿದ್ದಾನೆ. ಲೆಕ್ಕಿಗನಾಗಿದ್ದ ಹರಿಹರನು ಖ್ಯಾತ ಚಂಪೂ ಕಾವ್ಯವಾದ ಗಿರಿಜಾ ಕಲ್ಯಾಣವನ್ನೂ ಮತ್ತು ವಿಶಿಷ್ಟವಾದ ಇನ್ನೂ ಅನೇಕ ಚಂಪೂ ಕಾವ್ಯಗಳನ್ನೂ ರಗಳೆಗಳನ್ನೂ ರಚಿಸಿದ್ದಾನೆ. ರಾಘವಾಂಕ ಷಟ್ಪದಿಯೆಂದೇ ಹೆಸರಾಗಿರುವ ಹರಿಶ್ಚಂದ್ರ ಕಾವ್ಯದ ರಾಘವಾಂಕ ಮತ್ತೊಬ್ಬ ಶ್ರೇಷ್ಠ ವಿದ್ವಾಂಸ. ಇವನು ಸಿದ್ಧರಾಮ ಪುರಾಣ,ಸೋಮನಾಥ ಚರಿತೆ, ವೀರೇಶ ಚರಿತೆ ಎಂಬ ಇತರ ಖ್ಯಾತ ಗ್ರಂಥಗಳನ್ನೂ ರಚಿಸಿದ್ದಾನೆ. ಇವರಷ್ಟೇ ಅಲ್ಲದೆ ಅಭಿನವ ಪಂಪ ಅಥವಾ ನಾಗನಾಥ, ರಾಜಾದಿತ್ಯ, ರುದ್ರಭಟ್ಟ, ಶಬ್ದಮಣಿದರ್ಪಣವೆಂಬ ವ್ಯಾಕರಣ ಗ್ರಂಥ ಬರೆದ ಕೇಶಿರಾಜ, ಇವರೆಲ್ಲರೂ ಹೊಯ್ಸಳರ ಕಾಲದ ಘನ ವಿದ್ವಾಂಸರುಗಳು.ಹೊಯ್ಸಳರ ಆಳ್ವಿಕೆ ನವಕರ್ನಾಟಕದ ಉದಯಕ್ಕೆ ನಾಂದಿ ಹಾಡಿ, ಮುಂದೆ ಮೂಡಿಬಂದ ನಾಡಿಗೆ ಒಂದು ರೂಪುಕೊಟ್ಟ ರಾಜಮನೆತನವಾಯಿತು.

ಮುಂದಿನ ಪುಟ ನೋಡಿ ...

ದೇವಗಿರಿಯ ಸೇಉಣರು(ಯಾದವರು): ಇವರು ದೇವಗಿರಿಯಿಂದ ಕರ್ನಾಟಕದ ಉತ್ತರಭಾಗವನ್ನು ಆಳಿದ ಹೊಯ್ಸಳರ ಸಮಕಾಲೀನರು. ಸುಮಾರು ಕ್ರಿ.ಶ.೮೫೦ ರಿಂದ ೧೩೫೪ ರವರೆವಿಗೂ, ಆರಂಭದಲ್ಲಿ ಚಾಲುಕ್ಯರ ಸಾಮಂತರಾಗಿ ನಂತರ ಸ್ವತಂತ್ರರಾಗಿ ಮಹಾರಾಷ್ಟ್ರದ ದಕ್ಷಿಣ ಭಾಗಗಳಿಂದ ಆಳಿದ ಸೇವುಣರು, ತಮ್ಮ ಉಚ್ಛ್ರಾಯ ಸಮಯದಲ್ಲಿ ನರ್ಮದೆಯಿಂದ ತುಂಗಭದ್ರೆಯವರೆವಿಗು ರಾಜ್ಯವನ್ನು ಹೊಂದಿದ್ದರು. ಮರಾಠಿ, ಕನ್ನಡ ಹಾಗೂ ಸಂಸ್ಕೃತ ಇವರ ಆಡಳಿತ ಭಾಷೆಯಾಗಿದ್ದರೂ, ಮೂಲತಃ ಇವರು ಕನ್ನಡಿಗರಾಗಿದ್ದು, ನಂತರದ ದಿನಗಳಲ್ಲಿ ಮರಾಠಿಯನ್ನು ಒಪ್ಪಿಕೊಂಡಂತಿದೆ. ಅಲ್ಲದೇ ಇವರ ಹೆಸರುಗಳೂ ಕನ್ನಡದವೇ ಆಗಿದ್ದು, ಶಾಸನಗಳಲ್ಲೂ ಕನ್ನಡವನ್ನೇ ಹೆಚ್ಚಾಗಿ ಬಳಸುತ್ತಿದ್ದ ದಾಖಲೆಗಳಿವೆ.



ಸುಮಾರು ೮೫೦ ರಲ್ಲಿ ಸೇಉಣಚಂದ್ರನೆಂಬಾತನಿಂದ ಆರಂಭವಾದ ಇವರ ಆಳ್ವಿಕೆ ಇತರ ಗಣ್ಯ ಸಾಮ್ರಾಜ್ಯಗಳ ಅಡಿಯಲ್ಲಿ, ಅವರಿಗೆ ಸಹಾಯ ನೀಡುತ್ತಾ ಆಡಳಿತ ನಡೆಸುತ್ತಿತ್ತು. ಆದ್ರೆ ೧೧೭೫ ರಿಂದ ಸ್ವತಂತ್ರ ರಾಜರಾಗಿ ಮಹಾರಷ್ಟ್ರದ ದೇವಗಿರಿಯಿಂದ (ದೌಲತಾಬಾದ್) ಆಡಳಿತ ನಡೆಸಿದರು. ಭಿಲ್ಲಮ V, ಸಿಂಘಣ II, ಕನ್ನರ, ಮಹಾದೇವ ಮತ್ತು ರಾಮಚಂದ್ರ ಈ ರಾಜವಂಶದ ಗಣ್ಯ ಅರಸರುಗಳು. ತಮ್ಮ ಕಡೆಯ ದಿನಗಳಲ್ಲಿ ದೆಹಲಿಯ ಸುಲ್ತಾನರ ಕೈಯ್ಯಲ್ಲಿ ಸಿಲುಕಿ ತಮ್ಮ ರಾಜ್ಯವನ್ನು ಕಳೆದು ಕೊಂಡರು.

ಇವರ ಕಾಲದಲ್ಲಿ ವೈದೀಕ ಧರ್ಮವು ಸಾಕಷ್ಟು ಸವಾಲನ್ನೆದುರಿಸಬೇಕಾಯಿತು. ವೀರಶೈವ, ಭಕ್ತಿ ಮಾರ್ಗಗಳು ಹೆಚ್ಚಾಗಿ ಮೂರ್ತಿ ಪೂಜೆಗೆ ವಿರೋಧ ಕಾಣುತ್ತಿತ್ತು. ಕಮಲಭವ ಇವರ ಆಸ್ಥಾನದ ಗಣ್ಯ ಕನ್ನಡ ವಿದ್ವಾಂಸನಾಗಿದ್ದು, ಶಾಂತೀಶ್ವರ ಪುರಾಣ ರಚಿಸಿದ. ವೀರಶೈವ ವಚನಕಾರ ಅಮುಗಿದೇವ, ಚೌಂಡರಸ, ಅಚಣ್ಣ, ಈ ಕಾಲದ ಇತರ ಕನ್ನಡ ವಿದ್ವಾಂಸರು. ಇವರ ಶಾಸನಗಳಲ್ಲೇ ಅನೇಕ ಸುಂದರ ಕನ್ನಡ ಕವಿತೆಗಳಿವೆ. ಅನೇಕ ಸಂಸ್ಕೃತ ಹಾಗೂ ಮರಾಠಿ ಕೃತಿಗಳ ರಚನೆಯಾಯಿತು, ಖ್ಯಾತ ಗಣಿತಜ್ಞ ಭಾಸ್ಕರಾಚಾರ್ಯ ಸಿದ್ಧಾಂತಶಿರೋಮಣಿ ರಚಿಸಿದ್ದೂ ಈ ಸಮಯದಲ್ಲಿಯೇ. ▪

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದ ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ವಿಜ್ಞಾನ

ಸ್ಟ್ರಾಬೆರಿಯಿಂದ ಡಿ.ಏನ್.ಎ ಪಾಠ

ಸಂಕಲನ: ಬದರಿ ತ್ಯಾಮಗೊಂಡ್ಲು

ಡಿ.ಎನ್.ಎ (ಡಿ ಓಕ್ಸಿ ರೈಬೊ ನ್ಯೂಕ್ಲಿಕ್ ಆಸಿಡ್) ಎನ್ನುವುದು ಎಲ್ಲಾ ಜೀವಿಗಳಲ್ಲೂ ಕಂಡುಬರುವ ಪ್ರಧಾನ ಅನುವಂಶಿಕ ಜೈವಿಕ ಅಣುವಾಗಿದೆ. (ಹೆಚ್ಚಿನ ಮಾಹಿತಿಗೆ ಭೇಟಿ ಕೊಡಿ ಡಿ.ಏನ್.ಎ). ಇಂತಹ ಡಿ.ಏನ್.ಎ ಗುಂಪನ್ನು ಬರೀ ಕಣ್ಣಿನಿಂದ ನೋಡಲು ಈ ಪ್ರಯೋಗವನ್ನು ಮಾಡೋಣ.

ಬೇಕಾಗುವ ಸಾಮಗ್ರಿ:



- ೩-೪ ಚೆನ್ನಾಗಿ ಕಳೆತಿರುವ ಸ್ಟ್ರಾಬೆರಿ ಹಣ್ಣುಗಳು
- ಐಸೋಪ್ರೋಪೈಲ್ ಆಲ್ಕೋಹಾಲ್
  - (ಆಸ್ಟ್ರೇಲಿಯಾದಲ್ಲಾದರೆ Coles/Woolworths ನಂತಹ ಮಳಿಗೆಗಳಲ್ಲಿ ಕೇಳಿ ಪಡೆಯಬಹುದು)
- ಒಂದು ದೊಡ್ಡ ಚಮಚದಷ್ಟು ಪಾತ್ರೆ ತೊಳೆಯಲು ಬಳಸುವ ದ್ರವ (ಡಿಶ್ ವಾಶಿಂಗ್ ಲಿಕ್ವಿಡ್)
- ಕಾಲು ಚಮಚ ಉಪ್ಪು
- ಬಸಿಯುವ ಸಾಧನ (ಸಣ್ಣ ರಂಧ್ರದ್ದು), ಚಿಮಟ (tweezer), ಗಾಜಿನ ಲೋಟ, ಒಂದಷ್ಟು ನೀರು

ವಿಧಾನ:

- ಕಳೆತ ಸ್ಟ್ರಾಬೆರಿ ಹಣ್ಣು, ಡಿಶ್ ವಾಶಿಂಗ್ ಲಿಕ್ವಿಡ್, ಉಪ್ಪು - ಇವಿಷ್ಟನ್ನು ಪಾತ್ರೆಯಲ್ಲಿ ಒಂದು ೧೦೦ ಎಂ.ಎಲ್ ನೀರು ಬೆರೆಸಿ ಚೆನ್ನಾಗಿ ಕಿವುಚಿರಿ. ನೀವು ಚೆನ್ನಾಗಿ ಕಿವುಚಿದಷ್ಟು ಒಳ್ಳೆಯದು. (ಕಿವುಚುವುದನ್ನು ಸುಲಭ ಮಾಡಲು ಮತ್ತು ರೇಜಿಗೆ ತಪ್ಪಿಸಲು, ಒಂದು ಜಿಪ್ ಲಾಕ್ ಕವರ್ (Zip Lock Cover) ಒಳಗೆ ಹಾಕಿ ಕಿವುಚಬಹುದು)
- ನಂತರ ಕಿವುಚಿದ ದ್ರವವನ್ನು ಒಂದು ಗಾಜಿನ ಲೋಟದೊಳಕ್ಕೆ ಬಸಿಯುವ ಸಾಧನದ ಮೂಲಕ ಬಸಿಯಿರಿ.
- ಆ ಗಾಜಿನ ಲೋಟಕ್ಕೆ ಐಸೋಪ್ರೋಪೈಲ್ ಆಲ್ಕೋಹಾಲ್ ಹಾಕಿ ಲೋಟವನ್ನು ನಿಮ್ಮ ಕಣ್ಣಿನ ನೇರಕ್ಕೆ ಹಿಡಿದು ನೋಡಿರಿ
- ಮೇಲಿನ ಪದರದಲ್ಲಿ ಬಿಳೀ ಪದಾರ್ಥವು ಪ್ರತ್ಯೇಕಿಸಲ್ಪಟ್ಟಿರುವುದು ಕಾಣುವುದು.
- ಇದು ಸ್ಟ್ರಾಬೆರಿ ಡಿ.ಏನ್.ಎ ▪

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಪುರಂದರ ದಾಸರ ಆರಾಧನೆ

Sunday, 8th February 2015
Ermington Community Hall
9:00 am – 2:00 pm
8 River Road, Ermington NSW

Purandarasydney@yahoo.com.au

ಶ್ರೀ ಮಧ್ವ ನವಮಿ

Venue: SRI MANDIR
Address: No 286 Cumberland Road AUBURN
(Corner of Albert & Cumberland Roads)
Time: 9.30am to 2.00pm
Date: SATURDAY 07/02/2015
Contact: Sridhar & Nanda Kumsy - 9672-8485
Vadiraja & Shantha Tekkatte 9745-4883

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.